# ಮಹಿಳಾ ವಿಶೇಷ

MAHILA VISHESHA

**ಕನ್ನಡ ತಿಂಗಳ ಪತ್ರಿಕೆ ಡಿಸೆಂಬರ್ 1-31 2017**

KANNADA MONTHLY DECEMBER 1-31 2017

ಸಂಪುಟ 3, ಸಂಚಿಕೆ 4 ಪುಟ : 24, ಬೆಲೆ : ರೂ. 10–00

Vol. 3, Issue 4, Pages: 24, Price : Rs. 10-00

ಸಂಪಾದಕರು: **ಹೆಚ್.ವಿ. ವೆಂಕಟಸುಬ್ಬರಾವ್** ಮೊಬೈಲ್ 88803–34444



## ಒಳಪುಟಗಳಲ್ಲಿ...

| | |
|---|---|
| ದೇವರಿಗೇಕೆ ಮೊದಲ ನೈವೇದ್ಯ? | Pg. No. 4 |
| ನಾಳೆಯ ದೃಷ್ಟಿ | Pg. No. 6 |
| ದುಪಟ್ಟ | Pg. No. 8 |
| ಗದಗಿನಲ್ಲೊಂದು ಅನ್ನಭಾಗ್ಯ | Pg. No. 10 |
| ಬಿಲ್ವ ಮಹಾತ್ಮೆ | Pg. No. 18 |

**ನಾಡಿನ ಜನತೆಗೆ ಹನುಮ ಜಯಂತಿ, ಈದ್ ಮಿಲಾದ್, ನೌಕಾ ದಿನಾಚರಣೆ, ಶಾರದಾದೇವಿ ಜಯಂತಿ, ಅಂತರರಾಷ್ಟ್ರೀಯ ಐಕ್ಯಮತ್ಯ ದಿನ ಕಿಸಾನ್ ದಿವಸ, ಕ್ರಿಸ್‌ಮಸ್ ಹಾಗೂ ಬಾಕ್ಸಿಂಗ್ ಡೇ ಪ್ರಯುಕ್ತ ಶುಭಾಶಯಗಳು**





## 21 ಪತ್ರೆಗಳ ಮಾಹಿತಿ



ಗಣೇಶ ಚತುರ್ಥಿಯ ಶುಭಾಶಯಗಳು. ಗಣೇಶನ ಪೂಜೆಯನ್ನು ಮಾಡುವಾಗ ಅರ್ಚನೆಯಲ್ಲಿ 21 ಬಗೆಯ ಪತ್ರೆ ಅಥವಾ ಎಲೆಗಳ ವಿಧ್ಯುಕ್ತ ಪಾತ್ರವಿದೆ. ಇವು ಔಷಧೀಯ ಗುಣಗಳಿಂದಲೂ ಕೂಡಿದ್ದು, ಆಯುರ್ವೇದದಂಥ ಪ್ರಾಚೀನ ವೈದ್ಯಪದ್ಧತಿಯಲ್ಲಿ ಇಂದಿಗೂ ಪರಿಣಾಮಕಾರಿಯಾಗಿ ಬಳಕೆಯಾಗುತ್ತಿವೆ. ವೇದ-ಪುರಾಣ-ಜಾನಪದ ಕಥನ ರಾಶಿಯಲ್ಲಿ ಇವುಗಳ ಉಲ್ಲೇಖಗಳು ಹೇರಳವಾಗಿವೆ. ಒಂದೊಂದೇ ಪತ್ರೆಗಳ ಮಾಹಿತಿಯನ್ನು ನೀಡುವುದೇ ನಮ್ಮ ಉದ್ದೇಶವಾಗಿದೆ.

## 5. ಗರಿಕೆ (ದೂರ್ವಾ)

ಇಂಗ್ಲಿಷ್: ಬೆರ್ಮುಡಾ ಗ್ರಾಸ್

ಮಲಯಾಳಂ : ಕರುಕಪುಲ್ಲು

ಕನ್ನಡದಲ್ಲಿ ಕರಿಕೆ ಹುಲ್ಲು, ಅಂಬಟಿ ಎಂದೂ ಕರೆಸಿಕೊಳ್ಳುವ ಗರಿಕೆ ದೇವತಾರ್ಚನೆಯಲ್ಲಿ, ಅದರಲ್ಲಿಯೂ ಗಣೇಶನ ಪೂಜೆಯಲ್ಲಿ ಬಳಸುವ ಅಷ್ಟಮಂಗಲ ವಸ್ತುಗಳಲ್ಲಿ ಒಂದು. ಗರಿಕೆ ಇದ್ದಲ್ಲಿ ನೀರು ಇದ್ದೇ ಇರುತ್ತದೆ.

ಗರಿಕೆಯನ್ನು ದೀಪಾವಳಿಯಂದು ಅಭ್ಯಂಜನಕ್ಕೆ ಮುನ್ನ ಹಣೆಗೆ ಎಣ್ಣೆ ಹಚ್ಚಲು ಬಳಸುತ್ತಾರೆ. ರೋಮಗಳು ಚರ್ಮವನ್ನು ರಕ್ಷಿಸುವಂತೆ ಗರಿಕೆ ಪ್ರಾಣಶಕ್ತಿಯನ್ನು ರಕ್ಷಿಸುತ್ತದೆ.

ಗರಿಕೆಯು ಭಾರತದೆಲ್ಲೆಡೆ ಬೆಳೆಯುವ ಹುಲ್ಲು. ಹೊಲಗಳಲ್ಲಿ ವಿಪರೀತವಾಗಿ ಕಳೆಯಂತೆ ಬೆಳೆಯುತ್ತದೆ. ಇದರ ಕಾಂಡವು ನೆಲದ ಮೇಲೆಹರಡಿಕೊಂಡಿದ್ದು,ಕಾಂಡದಲ್ಲಿ, ಗೆಣ್ಣುಗಳಲ್ಲಿ ಬೇರುಗಳು ಮತ್ತು ಹೊಸ ಕಾಂಡದ ಚಿಗುರುಗಳಿರುತ್ತವೆ. ಕಾಂಡದ ಮೇಲೆ ಉದ್ದನೆಯ ಎಲೆಗಳು ಪರ್ಯಾಯವಾಗಿ ಜೋಡಣೆಯಾಗಿರುತ್ತವೆ.

**ಉಪಯುಕ್ತ ಭಾಗಗಳು:** ಹುಲ್ಲು, ಬೇರು, ಇಡೀ ಸಸ್ಯ.

### ಔಷಧೀಯ ಗುಣಗಳು

ಸುಟ್ಟ ಗಾಯಗಳಿಗೆ ಗರಿಕೆಯ ರಸವನ್ನು ಕೊಬ್ಬರಿ ಎಣ್ಣೆಗೆ ಬೆರೆಸಿ ತಯಾರಿಸಿದ ತೈಲವನ್ನು ಲೇಪಿಸಬೇಕು.

ಮೂಗಿನಿಂದ ರಕ್ತಸ್ರಾವವಾಗುತ್ತಿದ್ದಲ್ಲಿ ಗರಿಕೆ ಹುಲ್ಲಿನ ರಸ ಕುಡಿಯುವುದಲ್ಲದೇ, ರಸದ ಕೆಲವು ಹನಿಗಳನ್ನು ಮೂಗಿಗೆ ಹಾಕಬೇಕು.

ಮೂಲವ್ಯಾಧಿಯಿದ್ದಲ್ಲಿ ಗರಿಕೆಯ ರಸವನ್ನು ದಿನಕ್ಕೆರಡು ಇಲ್ಲವೇ ಮೂರು ಬಾರಿ, ಮೂರು ಚಮಚಗಳಷ್ಟು ಕುಡಿಯಬೇಕು.

(ಸಂಗ್ರಹ: ಶ್ರೀ ಸುಬ್ಬರಾಯ ಶರ್ಮ)

## ನನ್ನ ಮಾತು

### ಹಿಂಗಾದರೆ ಹೆಂಗೆ



ಕರ್ನಾಟಕ ರಾಜ್ಯದಲ್ಲಿ 2018ರ ವಿಧಾನ ಸಭಾ ಚುನಾವಣೆಯ ರಂಗು ಈಗಾಗಲೇ ಪಕ್ಷಗಳಿಂದ ವಿವಿಧ ರೀತಿಯಲ್ಲಿ ಆರಂಭಗೊಂಡಿದೆ. ಪಕ್ಷದ ನಾಯಕರು ಹಾಗೂ ಜನನಾಯಕರುಗಳ ತಂದೆ ತಾಯಿ ಹಾಗೂ ವಿದ್ಯೆ ಕಲಿಸಿದ ಗುರುಗಳು ಹೇಳಿಕೊಟ್ಟ ಆಚಾರ ವಿಚಾರ ಸಂಸ್ಕೃತಿ ಪಾಠ ಇವುಗಳು ನಾಯಕರುಗಳಲ್ಲಿ ಕಾಣುತ್ತಿಲ್ಲ. ಆಡುವ ಮಾತಲ್ಲಿ ಬಿಗಿಯಿಲ್ಲ. ಆರೋಪ ಪ್ರತ್ಯಾರೋಪ ಮಾಡುವಲ್ಲಿ ನಿಪುಣರು. ಇದೇನಾ ನೀವು ಚಿಕ್ಕ ವಯಸ್ಸಿನಿಂದ ಕಲಿತಿದ್ದು? ನಿಮ್ಮನ್ನು ನೋಡಿಯೇ ಮುಂದೆ ಬರುವ ಭಾವಿ ನಾಯಕರುಗಳು ಕಲಿಯಬೇಕಾಗಿರುವುದು ಏನು?

ಹೇಳುವುದೊಂದು ಮಾಡುವುದೊಂದಾದರೆ ನಿಮ್ಮ ಮನೆಯವರ ಹಾಗೂ ನಿಮ್ಮ ಮಕ್ಕಳ ಸ್ನೇಹಿತರುಗಳು ನಿಮ್ಮ ಬಗ್ಗೆ ಏನೆನ್ನುತ್ತಾರೆ ಎಂಬ ಅರಿವು ಇದೆಯೇ? ನಂಬಿಕೆ, ಶಾಂತಿ, ಸೌಹಾರ್ದತೆಯ ಗುಣಗಳು ಇಂದು ನಮ್ಮ ನಾಯಕರುಗಳಲ್ಲಿ ಎಲ್ಲಿ ಹೋಯಿತು? ಇರುವಾಗ ಕಚ್ಚಾಡುವುದು, ಬಡಿದಾಡುವುದು, ಆರೋಪ ಪ್ರತ್ಯಾರೋಪಗಳನ್ನು ಮಾಡುವುದೇ ಆಗಿದೆ. ಇಲ್ಲವಾದಾಗ ಅವರು ಒಳ್ಳೆಯವರು, ಹೀಗಾಗಬಾರದಿತ್ತೆಂದು ಸಂತಾಪ ಸೂಚಿಸುವುದು ಎಷ್ಟು ಸಮಂಜಸ?

ಫ್ರೀಡಂ ಎಂದರೇನು ಎಂಬುದನ್ನು ಮರೆತಂತಿದೆ. ಏನೇ ಮಾಡಿದರೂ ಅದೇ ಫ್ರೀಡಂ ಅನ್ನುವ ಪ್ರವೃತ್ತಿ ಈಗಾಗಿದೆ. ಇದು ಒಳ್ಳೆಯ ದಲ್ಲವೆಂದು ತಿಳಿದಿದ್ದರೂ ಅದನ್ನು ಬಿಡುವುದಿಲ್ಲ. ಮಹಿಳೆಯರಿಗೆ ಸಮಾನತೆ ಎನ್ನುವ ಎಲ್ಲ ಪಕ್ಷದವರೂ 224 ಕ್ಷೇತ್ರಗಳಲ್ಲಿ ಶೇ.50 ಅಥವಾ ಶೇ. 33 ಆದರೂ ಮಹಿಳಾ ಅಭ್ಯರ್ಥಿಗಳನ್ನು ಕಣಕ್ಕಿಳಿಸಲಿ. ಏಕೆ ಮಹಿಳೆಯರನ್ನು ಕಣಕ್ಕಿಳಿಸು ವುದಿಲ್ಲ? ಅಭ್ಯರ್ಥಿಗಳ ಕೊರತೆಯಿದೆಯೇ? ಹಾಗೇನಿಲ್ಲ. ಕ್ಷೇತ್ರದ ಜನರ ಕಾರ್ಯಕರ್ತರು ತಿಳಿಸುವುದನ್ನು ಚುನಾವಣೆಯಲ್ಲಿ ಅಭ್ಯರ್ಥಿಗಳು ನಿಲ್ಲಿಸಲು ಬಯಸುತ್ತದೆ ಎಂದು ಮೂಗಿನ ನೇರದ ಮಾತು. ಮಹಿಳೆಯರೇನು ಯಾವ ಪಕ್ಷ ಕೈಬೀಸಿ ಕರೆಯುತ್ತದೋ ಆ ಪಕ್ಷಕ್ಕೆ ಈ ಬಾರಿ ಜಯ.

***ಸಂಪಾದಕ***

**ಹೆಚ್.ವಿ. ಸುಬ್ಬರಾವ್**

ನಿವೃತ್ತ ಸಾ.ಶಿ.ಇ. ನೌಕರ

**ಮಹಿಳಾ ವಿಶೇಷ**

MAHILA VISHESHA

**ಕನ್ನಡ ತಿಂಗಳ ಪತ್ರಿಕೆ**

**ಡಿಸೆಂಬರ್, 1-31 2017**

KANNADA MONTHLY

DECEMBER 1-31, 2017

ಸಂಪುಟ 3, ಸಂಚಿಕೆ 4, ಪುಟ: 24

Price/ಬೆಲೆ : ರೂ. 10-00

Vol. 3, Issue 4, Pages: 24

ಮುಖಪುಟ:

**ಶ್ರೀ ಮಧುರೆ ಮೀನಾಕ್ಷಿ ದೇವಸ್ಥಾನ**

ಗೌರವ ಸಂಪಾದಕರು:

**ಶ್ರೀಮತಿ ಸತ್ಯಭಾಮಾ ದಾಸ್**

**ಶ್ರೀಮತಿ ಗೀತಾ ರಾವ್**

ಸಂಪಾದಕರು:

**ಹೆಚ್.ವಿ. ವೆಂಕಟಸುಬ್ಬರಾವ್**

ಮೊಬೈಲ್ 88803-34444

ಉಪಸಂಪಾದಕರು:

**ಎಸ್.ವೆಂಕಟರವಣಪ್ಪ**

**ದ್ವಾರಕನಾಥ್ ಜಿ.**

**ಭಾಸ್ಕರ್ ಹೆಚ್.ವಿ.**

ಕಛೇರಿ ವಿಳಾಸ:

ನಂ. 1, ಸೀತಾವಿಲಾಸ ಛತ್ರ, ಎನ್.ಎಸ್. ರಸ್ತೆ, ಕೆ.ಆರ್. ಮೊಹಲ್ಲಾ,ಮೈಸೂರು-24

E-mail: mahilavishesha@yahoo.com

mahilavishesha15@gmail.com

Web: www.mahilavishesha.in

2



## ನಾವು ಏಕೆ ಆಹಾರವನ್ನು ಭುಂಜಿಸುವ ಮೊದಲು ಪರಮಾತ್ಮನಿಗೆ ಸಮರ್ಪಿಸುತ್ತೇವೆ?

ಭಾರತೀಯರು ಆಹಾರವನ್ನು ಮೊದಲು ಪರಮಾತ್ಮನಿಗೆ ಸಮರ್ಪಿಸಿ, ನಂತರ ಅದನ್ನೇ ''ಪ್ರಸಾದ'' ರೂಪದಲ್ಲಿ – ಪರಮಾತ್ಮನ ಅನುಗ್ರಹದಿಂದ ಒದಗಿರುವ ''ಭಾಗ್ಯವೆಂದು'' ಭಾವಿಸಿ – ಭುಂಜಿಸುವ ಕ್ರಮ ಉಂಟು. ಪಾಶ್ಚಿಮಾತ್ಯ ಸಂಪ್ರದಾಯದಲ್ಲೂ, ಪರಮಾತ್ಮನಿಗೆ ವಂದನಾಪೂರ್ವಕ ಪ್ರಾರ್ಥನೆಯನ್ನು ಸಲ್ಲಿಸಿದ ನಂತರವೇ, ಆಹಾರವನ್ನು ಸೇವಿಸುವ ಅಭ್ಯಾಸ ಉಂಟು. ದೇವಸ್ಥಾನ ಹಾಗೂ ಅನೇಕ ಮನೆಗಳಲ್ಲಿ, ಪ್ರತಿ ದಿವಸ, ಬೇಯಿಸಿದ ಭಕ್ಷ್ಯವನ್ನು ಮೊದಲು ಪರಮಾತ್ಮನಿಗೆ ಸಮರ್ಪಿಸುವುದು ವಾಡಿಕೆ. ಹಾಗೆ ಸಮರ್ಪಿಸಿದ ಭಕ್ಷ್ಯವನ್ನು ಉಳಿದ ಆಹಾರದ ಜೊತೆ ಮಿಶ್ರಣ ಮಾಡಿ ನಂತರ ಅದನ್ನು ''ಪ್ರಸಾದ''ವೆಂದು ಹಂಚಲಾಗುತ್ತದೆ. ನಮ್ಮ ಪ್ರತಿನಿತ್ಯದ ಷೋಡಶೋಪಚಾರ ಪೂಜೆಯ ವಿಧಾನದಲ್ಲೂ ''ನೈವೇದ್ಯ''ವನ್ನು ಸಮರ್ಪಿಸುವ ಕ್ರಮ ಉಂಟು. ನಾವು ಏಕೆ ಹೀಗೆ ಆಚರಿಸುತ್ತೇವೆ?

### ನಾವು ಏಕೆ ''ನೈವೇದ್ಯ''ವನ್ನು ಸಮರ್ಪಿಸುತ್ತೇವೆ?

ಪರಮಾತ್ಮನು ಸರ್ವಶಕ್ತ ಮತ್ತು ಸರ್ವಜ್ಞ. ಮಾನವನು ವ್ಯಷ್ಟಿ, ಭಗವಂತನು ಸಮಷ್ಟಿ. ನಾವುಯಾವುದಾದರೂ ಉತ್ತಮ ಕಾರ್ಯ ಮಾಡುವಂತಾಗಿದ್ದರೆ, ನಿಸ್ಸಂಶಯವಾಗಿ ಅದು ಪರಮಾತ್ಮನ ಅನುಗ್ರಹ – ಆತನು ದಯಪಾಲಿಸಿರುವ ಶಕ್ತಿ ಹಾಗೂ ಸಾಮರ್ಥ್ಯದಿಂದಲೇ ಕಾರ್ಯವು ಸಾಧ್ಯವಾಗಿರುವುದು. ಆದ್ದರಿಂದ, ನಾವು ಜೀವನದಲ್ಲಿಯಾವುದೇ 'ಫಲ' ಸ್ವೀಕರಿಸಿದ್ದರೂ, ಅದು ಅವನದ್ದೇ ಆಗಿರುತ್ತದೆ. ಈ ಸತ್ಯವನ್ನು 'ನೈವೇದ್ಯ'ವನ್ನು ಸಮರ್ಪಿಸುವುದರೊಂದಿಗೆ ನಾವು ಅಂಗೀಕರಿಸುತ್ತೇವೆ. 'ತೇರಾ ತುಝ್‍ಕೋ ಅರ್ಪಣ್' ಎಂಬ ಜಾಣ್ನುಡಿಯು ಈ ವಿಚಾರವನ್ನು ಸ್ಪಷ್ಟೀಕರಿಸುತ್ತದೆ – 'ಯಾವುದು ನಿನ್ನದೋ, ಅದನ್ನೇ ನಿನಗೆ ಅರ್ಪಿಸುತ್ತಿದ್ದೇನೆ.' ಈ ಅರ್ಪಣೆಯ ನಂತರ, ಅದನ್ನೇ 'ಪ್ರಸಾದ' ರೂಪದಲ್ಲಿ ನಾವು ಸ್ವೀಕರಿಸುವಾಗ, ಪರಮಾತ್ಮನ ದಿವ್ಯ ಸ್ಪರ್ಶದಿಂದ ಅದು ಅನುಗ್ರಹಿಸಲ್ಪಟ್ಟಿರುತ್ತದೆ.

ಈ ಅರಿವಿದ್ದರೆ – ಭಕ್ಷ್ಯಗಳ ಕಡೆ ನಮ್ಮ ಮನೋವೃತ್ತಿ ಹಾಗೂ ಭುಂಜಿಸುವ ರೀತಿಯಲ್ಲಿ – ಬಹಳಷ್ಟು ಪರಿವರ್ತನೆಯನ್ನು ನಾವು ಕಾಣಬಹುದು. ಇದರಿಂದಾಗಿ ಸಮರ್ಪಿಸಿದ ಆಹಾರವು ಸ್ವಾಭಾವಿಕವಾಗಿ, ಶುದ್ಧ ಹಾಗೂ ಉತ್ತಮ ಗುಣಮಟ್ಟದ್ದಾಗಿರುತ್ತದೆ. ನಮ್ಮಲ್ಲಿ ಲಭ್ಯವಿರುವುದನ್ನು ಭಕ್ಷಿಸುವ ಮುನ್ನ, ಇತರರೊಂದಿಗೆ ಹಂಚಿಕೊಳ್ಳುತ್ತೇವೆ. ನಮಗೆ ದೊರಕುವ ಆಹಾರದ ಗುಣಮಟ್ಟದ ಬಗ್ಗೆ ಆಗ್ರಹ, ದೂರು ಅಥವಾ ನಿಂದನೆಯನ್ನು ನಾವು ಮಾಡುವುದಿಲ್ಲ. ಆಹಾರವನ್ನು ವ್ಯರ್ಥ ಮಾಡದೆ ಅಥವಾ ತಿರಸ್ಕರಿಸದೆ, 'ಪ್ರಸಾದಬುದ್ಧಿ'ಯಿಂದ ಕೂಡಿದವರಾಗಿ ಸಂತೋಷದಿಂದ ಸ್ವೀಕರಿಸುತ್ತೇವೆ. ಈ ಮನೋವೃತ್ತಿಯಲ್ಲೇ ನಾವು ಸ್ಥಾಪಿತವಾಗುವುದಾದರೆ, ಇದು ಕೇವಲ ಆಹಾರಕ್ಕೆ ಮಾತ್ರ ಸೀಮಿತವಾಗದೆ, ನಮ್ಮ ಜೀವನದ ಎಲ್ಲ ಚಟುವಟಿಕೆಗಳಲ್ಲೂ ವ್ಯಾಪ್ತವಾಗುತ್ತದೆ. ನಂತರ, ಬದುಕಿನಲ್ಲಿ ಬರುವ ಎಲ್ಲ ಎಡರು ತೊಡರುಗಳನ್ನೂ ಪರಮಾತ್ಮನ 'ಪ್ರಸಾದ'ವೆಂದು ಮುಗುಳ್ನಗೆಯಿಂದ ಸ್ವೀಕರಿಸುವ ಕುಶಲತೆಯನ್ನು ನಾವು ಬೆಳೆಸಿಕೊಳ್ಳುತ್ತೇವೆ.

ಭಕ್ಷ್ಯವನ್ನು ಭುಂಜಿಸುವ ಮುನ್ನ, ಮೊದಲು ನಾವು – ಆಹಾರವನ್ನು ಶುದ್ಧೀಕರಿಸುವ ಸಲುವಾಗಿ – ತಟ್ಟೆಯ ಸುತ್ತಲೂ ನೀರನ್ನು ಚಿಮುಕಿಸಬೇಕು. ನಂತರ, ಐದು ತುತ್ತು ಆಹಾರವನ್ನು ತಟ್ಟೆಯ ಪಕ್ಕ – ಐದು ಬಗೆಯ ಋಣವನ್ನು ಒಪ್ಪಿಕೊಳ್ಳುವ ಸಲುವಾಗಿ – ಇಡಲಾಗುತ್ತದೆ. ಅವುಗಳು ಯಾವುವೆಂದರೆ:

**1. ದೇವ ಋಣ:** ದೈವಿಕ ಶಕ್ತಿಯ ಕರುಣಾಪೂರ್ವಕ ಅನುಗ್ರಹ ಹಾಗೂ ಅದರ ರಕ್ಷಣೆಯ ಛಾಯೆಯಲ್ಲೇ ಇರುವುದನ್ನು ನೆನಪಿಸಿಕೊಳ್ಳುವ ಔದಾರ್ಯ.

**2 ಪಿತೃಋಣ:** ನಮಗೆ ಉತ್ತಮವಾದ ಮನೆತನ ಹಾಗೂ ಶ್ರೇಷ್ಠ ರೀತಿಯ ಸಂಸ್ಕೃತಿಯನ್ನು ನಮ್ಮಲ್ಲಿ ಬೆಳೆಸಿದ್ದಕ್ಕಾಗಿ, ನಮ್ಮ ಪೂರ್ವಜರಿಗೆ ನಾವು ಅರ್ಪಿಸುವ ಕೃತಜ್ಞತೆ.

**3. ಋಷಿ ಋಣ:** ಶಾಸ್ತ್ರವಿಹಿತವಾದ ಧಾರ್ಮಿಕ ಜೀವನವನ್ನು ನಿರ್ವಹಿಸುವುದರಿಂದಲೇ, ಬೌದ್ಧಿಕ ಪರಿಪಕ್ವತೆಯು ಸಾಧ್ಯವಾಗುವುದು. ಇಂತಹ ಪರಿಪಕ್ವತೆಯನ್ನು ಗಳಿಸಿಕೊಂಡು ಋಷಿಗಳು – ನಮ್ಮಲ್ಲೂ ಧಾರ್ಮಿಕ ಜಾಗೃತಿ ಉಂಟಾಗಬಹುದಾದ ಸಂಸ್ಕೃತಿಯನ್ನು ದಯಪಾಲಿಸಿರುತ್ತಾರೆ. ಈ ಶ್ರೇಯಸ್ಕರ ಮಾರ್ಗವನ್ನು ಬೋಧಿಸಿದ ಋಷಿವರೇಣ್ಯರಿಗೆ ನಾವು ಸಲ್ಲಿಸಬೇಕಾದ ಗೌರವ- ಋಷಿ ಋಣ.

**4. ಮನುಷ್ಯ ಋಣ:** ನಾವು ಸಂಘಜೀವಿಗಳು. ನಮ್ಮ ಏಳಿಗೆಯು ಅನೇಕಾನೇಕ ಜನರ ಸಹಾಯದಿಂದ ಸಾಧ್ಯವಾಗಿರುತ್ತದೆ. ಇಂತಹ ಸಮಾಜದಿಂದ ಉಪಕಾರವನ್ನು ಸ್ವೀಕರಿಸಿ, ಬೆಳೆದಂತಹ ನಾವು, ಪ್ರತ್ಯುಪಕಾರವಾಗಿ ಸಾಮಾಜಿಕ ಕ್ಷೇತ್ರದ ಔನ್ನತ್ಯಕ್ಕಾಗಿ ಶ್ರಮಿಸುವುದೇ ಮನುಷ್ಯ ಋಣ.

**5. ಭೂತ ಋಣ:** ಇತರ ಪ್ರಾಣಿ ಅಥವಾ ಜೀವಿಗಳೂ ಸಹ ನಮಗೆ ಅನೇಕ ರೀತಿಯಲ್ಲಿ ನಿಸ್ವಾರ್ಥವಾಗಿ ಸೇವೆ ಮಾಡಿರುತ್ತವೆ. ಅವುಗಳೆಲ್ಲಕ್ಕೂ ನಾವು ಕೃತಜ್ಞತೆಯನ್ನು ಸಲ್ಲಿಸುವುದೇ ಭೂತ ಋಣ.

ಇದಾದ ನಂತರ, ಜೀವನಾಧಾರವಾಗಿರುವ ಪ್ರಾಣಶಕ್ತಿ–ಪರಮಾತ್ಮನಿಗೂ–ಶಾರೀರಿಕ ಮಟ್ಟದಲ್ಲಿ ಪಡೆಯುವ ಪಂಚಪ್ರಾಣ ಕ್ರಿಯೆಗಳಿಗನುಸಾರವಾಗಿ–ಆಹಾರವನ್ನು ವಿನಿಯೋಗಿಸಲಾಗುತ್ತದೆ. ಅವುಗಳು ಹೀಗಿವೆ: ಪ್ರಾಣಾಯ ಸ್ವಾಹಾ (ಶ್ವಾಸೋಚ್ಛ್ವಾಸ); ಅಪಾನಾಯ ಸ್ವಾಹಾ (ಮಲ ವಿಸರ್ಜನೆ); ವ್ಯಾನಾಯ ಸ್ವಾಹಾ (ರಕ್ತ ಪರಿಚಲನೆ); ಉದಾನಾಯ ಸ್ವಾಹಾ (ಪರಾವರ್ತನ); ಸಮಾನಾಯ ಸ್ವಾಹಾ (ಪಾಚಕ) ಮತ್ತು ಬ್ರಹ್ಮಣೇ ಸ್ವಾಹಾ (ಸರ್ವಶಕ್ತ). ಹೀಗೆ ಆಹಾರವನ್ನು ಸಮರ್ಪಿಸಿದ ನಂತರ, 'ಪ್ರಸಾದ'ವೆಂದು ಭುಂಜಿಸಲ್ಪಡುತ್ತದೆ.

**ಡಿಸೆಂಬರ್ 23ರಂದು ರೈತರ ದಿನಾಚರಣೆ**

ಮಹಿಳಾ ವಿಶೇಷ ಪತ್ರಿಕಾ ಬಳಗವು ಡಿ. 23 ಶನಿವಾರದಂದು ರೈತರ ದಿನಾಚರಣೆಯನ್ನು ನಡೆಸಲು ಉದ್ದೇಶಿಸಲಾಗಿದೆ. ಈ ಸಂದರ್ಭದಲ್ಲಿ ಮಹಿಳೆಯರಿಗಾಗಿ ಕಾರ್ಯಕ್ರಮವೊಂದನ್ನು ಆಯೋಜಿಸಲು ಆಲೋಚಿಸಿದೆ. ಆಸಕ್ತರು ಮೊಬೈಲ್ ಸಂ. 92435–84444 ಸಂಪರ್ಕಿಸಿ.





# ನಾಳೆಯ ದೃಷ್ಟಿ

ಪ್ರಾಣೇಶ ಎಲ್ಲರಿಗೂ ಬೇಕಾದವನು. ಅವನಿಗೆ ಹಿರಿಯರಿಂದ ಬಂದ ಭೂಮಿ ಹಾಗೂ ಮನೆ ಇದೆ. ಹನುಮಪ್ಪನ ಗುಡಿ ಪೂಜೆ ಜವಾಬ್ದಾರಿಯೂ ಅವನದೇ. ಒಬ್ಬ ಮಗಳು ಹಾಗೂ ಒಬ್ಬ ಮಗ. ಮಗಳಿಗೆ ಮದುವೆ ಮಾಡಿದ್ದಾನೆ. ಮಗ ಕೃಷಿ ಪದವಿ ಮಾಡಿಕೊಂಡು ತಂದೆ ಜೊತೆಯಲ್ಲಿ ಭೂಮಿತಾಯಿಯೊಂದಿಗೆ ಹಗಲಿರುಳು ದುಡಿಯುತ್ತಿದ್ದಾನೆ. ಪರಿಸ್ಥಿತಿಗೆ ಅನುಗುಣವಾಗಿ ವ್ಯವಸಾಯದಲ್ಲಿ ಬದಲಾವಣೆಗಳನ್ನು ಮಾಡಿದ್ದರಿಂದ ಯಶಸ್ಸನ್ನು ಕಂಡರು. ಪ್ರಾಣೇಶನ ಹೆಂಡತಿ ಬಡಕುಟುಂಬದ ಹೆಣ್ಣು. ಗಂಡನಿಗೆ ಸಹಕಾರಿಯಾಗಿ ಜೀವನ ನಡೆಸಿದಳು. ದುಡಿಮೆಯಿಂದ ನೆಮ್ಮದಿ ಕಂಡಳು.

ಚಂದ್ರ ಪ್ರಾಣೇಶನ ಗೆಳೆಯ. ಪಕ್ಕದ ಹಳ್ಳಿಯವನು. ಶ್ರೀಮಂತಿಕೆಯಲ್ಲಿ ಬೆಳೆದವನು. ಪಟ್ಟಣದಲ್ಲಿ ಓದಲು ಹೋಗಿ ಓದು ಹತ್ತಲಿಲ್ಲ, ಓದು ನಿಲ್ಲಿಸಿ ಹಳ್ಳಿಗೆ ಹಿಂತಿರುಗಿದ. ಅಪ್ಪನ ಆಸ್ತಿ ಖರ್ಚು ಮಾಡುತ್ತಾ ಮೋಜಿನ ಜೀವನ ನಡೆಸಿದ. ಕುಟುಂಬಕ್ಕೆ ತಕ್ಕ ಹಾಗೆ ಶ್ರೀಮಂತರ ಕುಟುಂಬದವಳು ಅವನ ಹೆಂಡತಿ. ಗಂಡನ ಹಾಗೆ ಅವಳೂ ಆಡಂಬರ ಪ್ರಿಯಳು.

ಚಂದ್ರನ ಜೀವನದಲ್ಲಿ ಅನಿರೀಕ್ಷಿತ ಪೆಟ್ಟು ಬಿದ್ದಿತು. ತಂದೆ ರಾಜಕೀಯ ಸೋಲು ಕಂಡ ನಂತರ ಸಂಸಾರದ ಇಡೀ ಹೊಣೆಗಾರಿಕೆ ಚಂದ್ರನ ಹೆಗಲ ಮೇಲೆ ಬಿದ್ದಿತು. ಐದು ಮಕ್ಕಳು ಬೇರೆ. ಇದ್ದಬದ್ದ ಆಸ್ತಿಯೆಲ್ಲಾ ತಂದೆ ಹಾಗೂ ತನಗೆ ಸಾಲ ಕೊಟ್ಟವರ ವಶವಾಯಿತು. ನಿರ್ಗತಿಕವಾಗಿ ನಿಂತುಬಿಟ್ಟ ಶ್ರೀಮಂತರ ಮಗ! ಎಲ್ಲಾದರೂ ದುಡಿಯೋಣವೆಂದರೆ ಹಳೆಯ ಶ್ರೀಮಂತಿಕೆಯ ಪ್ರತಿಷ್ಠೆ ನೆನಪಿಗೆ ಬಂದು ಕೆಲಸಕ್ಕೆ ಹೋಗುವುದನ್ನು ತಡೆಯುತ್ತಿತ್ತು.

ಪರಿಸ್ಥಿತಿ ತೀರ ಕೆಟ್ಟಾಗ ಹತ್ತಿರದಲ್ಲಿ ಇದ್ದ ಮರದ ದಿಮ್ಮಿ ಕೊಯ್ಯುವ ಮಳಿಗೆಯಲ್ಲಿ ಗುಮಾಸ್ತನಾಗಿ ಕೆಲಸಕ್ಕೆ ಸೇರಿದ. ಒಮ್ಮೆ ಕೆಲಸದಿಂದ ಹಿಂತಿರುಗಿ ಬರುತ್ತಿರುವಾಗ ಗೆಳೆಯ ಪ್ರಾಣೇಶ ಎತ್ತಿನ ಬಂಡಿಯಲ್ಲಿ ಸಂತೆಯಿಂದ ಬರುತ್ತಿದ್ದ. ಕೂತಿದ್ದವನು ಇಳಿದು ಆತ್ಮೀಯತೆಯಿಂದ ಗೆಳೆಯನನ್ನು ಗಾಡಿಯಲ್ಲಿ ಕೂಡಿಸಿಕೊಂಡನು. ತಮ್ಮ ಹಳೆ ನೆನಪುಗಳ ವಿನಿಮಯ ಮಾಡಿಕೊಂಡರು. ಚಂದ್ರನನ್ನು ತನ್ನ ಮನೆಗೆ ಆಹ್ವಾನಿಸಿದನು. ಹೆಂಡತಿ ಮಕ್ಕಳೂ ಆತ್ಮೀಯವಾಗಿ ಸ್ವಾಗತಿಸಿದರು. ಪುಷ್ಕಳ ಭೋಜನ ಆಯಿತು. ನಮ್ಮ ತಂದೆ ಹೇಳುತ್ತಿದ್ದರು: 'ಹೊಟ್ಟೆ ಬಿರಿಯಾ ತಿನ್ನು, ರಟ್ಟೆ ಮುರಿಯಾ ಹಂಗೆ ಕೆಲಸ ಮಾಡು'. ಪ್ರಾಣೇಶನ ಈ ಮಾತಿನಿಂದ ಚಂದ್ರ ಮೂಕನಾದನು.

ಚಂದ್ರ ಮನೆಗೆ ಹೊರಟಾಗ ಪ್ರಾಣೇಶ ತಮ್ಮ ತೋಟದಲ್ಲಿ ಬೆಳೆದ ತರಕಾರಿ, ಹೂವು, ಹಣ್ಣುಗಳನ್ನು ಒಂದು ಚೀಲದಲ್ಲಿ ಕೊಟ್ಟನು. ಹೊರಗೆ ಬಂದಾಗ 'ಪ್ರಾಣೇಶ, ನಾನು ಹೀಗೆ ಕೇಳುತ್ತಿದ್ದೀನಿ ಅಂತ ತಪ್ಪಾಗಿ ತಿಳಿದುಕೊಳ್ಳಬೇಡ. ನೀನು ಈ ಸ್ಥಿತಿಗೆ ಹೇಗೆ ಬಂದೆ?'

ಅದಕ್ಕೆ ಪ್ರಾಣೇಶ ಹೇಳಿದ: 'ಈ ದಿನವೇ ನಾಳೆಯ ಬಗ್ಗೆ ಯೋಚಿಸಬೇಕು. ಹತ್ತು ರೂಪಾಯಿ ಇದ್ದಾಗ ನಾಳೆಗೆ ಉಳಿಸಿಕೊಳ್ಳಬೇಕು. ಈ ದಿನ ಇದೆಯಲ್ಲಾಂತ ಖರ್ಚು ಮಾಡಿದರೆ ನಾಳೆ ಕಂಡವರ ಬಳಿ ಕೈಚಾಚ ಬೇಕಾಗುತ್ತದೆ. ಎಂದು ನಾವು ಕೈ ಚಾಚುತ್ತೇವೆಯೋ ಅಂದು ನಮ್ಮ ಆತ್ಮಗೌರವ ಕಳೆದುಕೊಳ್ಳುತ್ತೇವೆ. ನಾನು ನನ್ನ ಹೆಂಡತಿ ಇದ್ದುದರಲ್ಲೇ ಸಂಸಾರ ಮಾಡಿದೆವು. ಮನುಷ್ಯನಿಗೆ ಕಣ್ಣು ಹೇಗೆ ಮುಖ್ಯವೋ ಮನೆಗೆ ಗೃಹಿಣಿ ಮುಖ್ಯ. ಮಿತವಾದ

ಖರ್ಚು ನಮ್ಮ ಈ ಸುಖಕ್ಕೆ ಕಾರಣ. ಒಟ್ಟಿನಲ್ಲಿ ನಾಳೆಯ ದೃಷ್ಟಿ ಇರಬೇಕು' ಎಂದು ಹೇಳಿದ.

ಮಿತ್ರ ಹೇಳಿದ 'ನಾಳೆಯ ದೃಷ್ಟಿ' ಎಂಬ ಹಿತವಚನವನ್ನೇ ನೆನೆಯುತ್ತಾ ಚಂದ್ರನು ನಿಧಾನವಾಗಿ ತಣ್ಣನೆಯ ಗಾಳಿಯಲ್ಲಿ ತನ್ನ ಹಳ್ಳಿ ಕಡೆ ಹೊರಟನು.

---

## ಮಳೆಗಾಲದಲ್ಲಿ ಯಾವ ಪೋಷಾಕು ಸೂಕ್ತ

ಮಳೆಗಾಲದಲ್ಲಿ ಎಲ್ಲಿ ನೋಡಿದರೂ ನೀರಿನ ಆರ್ಭಟವೇ ಕಂಡುಬರುತ್ತಿರುತ್ತದೆ. ನಾವು ಆಫೀಸಿಗೆ ಅಥವಾ ಹೊರಗೆಲ್ಲಾದರೂ ಸುತ್ತಾಡಲು ಹೊರಟರೆ ನಮ್ಮ ಬಟ್ಟೆಗಳು ಗಲೀಜಾದರೆ ಏನು ಗತಿ ಎಂಬ ಚಿಂತೆ ನಮ್ಮನ್ನು ಕಾಡುತ್ತಿರುತ್ತದೆ.

ಈ ಕುರಿತಂತೆ ಫ್ಯಾಷನ್ ಡಿಸೈನರ್ ಅರ್ಚನಾ ಹೀಗೆ ಹೇಳುತ್ತಾರೆ, ''ಆಕಸ್ಮಿಕ ಮಳೆಯಿಂದ ಬಟ್ಟೆ ಒದ್ದೆಯಾಗಿ ಗಂಟೆಗಟ್ಟಲೆ ಆಫೀಸಿನಲ್ಲಿ ಕುಳಿತು ಕೆಲಸ ಮಾಡುವುದು ಉದ್ಯೋಗಸ್ಥ ಮಹಿಳೆಯರಿಗೆ ಅತ್ಯಂತ 'ತ್ರಾಸದಾಯಕ ಕೆಲಸ'ವಾಗಿರುತ್ತದೆ.

''ಇಂತಹ ಸ್ಥಿತಿಯಲ್ಲಿ ಸೂಕ್ತ ಫ್ಯಾಬ್ರಿಕ್‌ನ ಆಯ್ಕೆ ನಿಮಗೆ ಮುಕ್ತವಾಗಿ ಜೀವಿಸುವ ಸ್ವಾತಂತ್ರ್ಯವನ್ನು ನೀಡುತ್ತದೆ. ಹಳದಿ ಕಾಟನ್, ಕ್ರೇಪ್ಸ್, ಪಾಲಿಯೆಸ್ಟರ್, ನೈಲಾನ್ ಮುಂತಾದವು ಸುಲಭವಾಗಿ ನೀರನ್ನು ಹೀರಿಕೊಳ್ಳುವುದಿಲ್ಲ. ಲಿನನ್ ಬಟ್ಟೆಗಳು ಈ ಹವಾಮಾನಕ್ಕೆ ಸೂಕ್ತವಲ್ಲ.''

**ಈ ಹವಾಮಾನಕ್ಕೆ ಯಾವ ಬಗೆಯ ಪೋಷಾಕು ಸೂಕ್ತ ಎನ್ನುವುದನ್ನು ತಿಳಿದುಕೊಳ್ಳಿ.**

ಜಾರ್ಜೆಟ್, ಶಿಫಾನ್ ಮುಂತಾದ ಪೋಷಾಕುಗಳನ್ನು ಆದಷ್ಟು ಧರಿಸಲು ಹೋಗಬೇಡಿ. ಮಳೆಯಿಂದ ಈ ಪಾರದರ್ಶಕ ಬಟ್ಟೆಗಳು ಒದ್ದೆಯಾಗಿಬಿಟ್ಟರೆ ಕಾರಣವಿಲ್ಲದೆಯೇ ಅಂಗಪ್ರದರ್ಶನ ಮಾಡಿದಂತಾಗುತ್ತದೆ.

ನೀವು ಧರಿಸುವ ಬಟ್ಟೆ ಬಹುಬೇಗ ಒಣಗುವಂತಿರಬೇಕು.

ನೀವು ಪ್ಲಸ್ ಸೈಜಿನವರು ಆಗಿದ್ದರೆ, ದೇಹಕ್ಕೆ ಅಂಟಿಕೊಳ್ಳುವ ಪೋಷಾಕು ಧರಿಸಬೇಡಿ.

ನೀ ಲೆಂಥ್ ಪೋಷಾಕು ಧರಿಸಲು ಪ್ರಯತ್ನಿಸಿ.

ಗಾಢ ವರ್ಣದ ಬಟ್ಟೆಗಳನ್ನೇ ಧರಿಸಿ.

ಮಳೆಗಾಲದ ಸಮಯದಲ್ಲಿ ನಿಮ್ಮ ಬ್ಯಾಗಿನಲ್ಲಿ ಒಂದು ಹೆಚ್ಚುವರಿ ಪೋಷಾಕನ್ನು ಜೊತೆಗಿಟ್ಟುಕೊಳ್ಳಿ. ಅಗತ್ಯ ಬಿದ್ದಾಗ ಡ್ರೆಸ್ ಬದಲಿಸಲು ಅನುಕೂಲವಾಗುತ್ತದೆ. ಗುಲಾಬಿ, ನೀಲಿ, ಹಸಿರು, ಆರೆಂಜ್ ಮುಂತಾದ ಬಣ್ಣಗಳ ಫ್ಯಾಬ್ರಿಕ್ ಈ ವಾತಾವರಣದಲ್ಲಿ ಚೆನ್ನಾಗಿ ಕಾಣುತ್ತವೆ.

ರಾಂಪರ್ಸ್, ಸ್ಕರ್ಟ್ಸ್ ಲೂಸ್ ಪ್ರಿಂಟೆಡ್ ಶರ್ಟ್ ಮತ್ತು ಪ್ಯಾಂಟ್ ಮುಂತಾದವು ಕ್ಯಾಶ್ಯುಯಲ್‌ಗೆ ಉತ್ತಮ. ಗ್ಲಾಮರಸ್ ಲುಕ್‌ಗೆ ಕಫ್ತಾನ್, ಟೂನಿಕ್ಸ್ ಮತ್ತು ಶಾರ್ಟ್ ಡ್ರೆಸ್ ಬಹಳ ಸುಂದರವಾಗಿ ಕಾಣುತ್ತವೆ.

ಕೆ. ಕವಿತಾ



## ಯುವತಿಯರ ಲಾವಣ್ಯದ ರೂಪಕ ದುಪಟ್ಟಾ

ನಮ್ಮ ಜೀವನಶೈಲಿ ಬದಲಾದ ಹಾಗೆ, ನಾವು ಧರಿಸುವ ಉಡುಪುಗಳ ಶೈಲಿಯೂ ಬದಲಾಗಿದೆ. ಅವುಗಳಲ್ಲಿ ಪಾಶ್ಚಾತ್ಯ ಉಡುಪುಗಳೂ ಸೇರಿವೆ. ಹಾಗಾಗಿ ಇಂದಿನ ಹುಡುಗಿಯರ ಬಳಿ ಪಾಶ್ಚಾತ್ಯ ಉಡುಪುಗಳಿರುವುದೇ ಹೆಚ್ಚು. ಆದರೂ, ಅವುಗಳ ಮಧ್ಯೆ ನಮ್ಮ ಸಾಂಪ್ರದಾಯಿಕ ಉಡುಗೆಗಳು ದುಪಟ್ಟಾಗಳಿಂದ ಹೊಸ ಹೊಸ ರೂಪ ತಳೆದು ಪ್ರಮುಖ ಆಕರ್ಷಣೆಯಾಗಿವೆ.

ಹುಡುಗಿಯರ ಯಾವುದೇ ಉಡುಪಿರಲಿ ಅದಕ್ಕೆ ದುಪಟ್ಟಾ ಇದ್ದರೇನೇ ಒಂದು ರೂಪ, ಲಾವಣ್ಯ. ಅದು ಚೂಡಿದಾರ ಇರಲಿ, ಲೆಹಂಗಾ ಇರಲಿ, ಜೀನ್ಸ್ ಇರಲಿ, ಕುರ್ತಾಗಳಿರಲಿ, ಅದರೊಂದಿಗೆ ದುಪಟ್ಟಾ ಇದ್ದರೇನೇ ಚೆಂದ.

ಮೊದಲೆಲ್ಲಾ ಸಾಂಪ್ರದಾಯಿಕ ಉಡುಗೆಗಳಿಗೆ ಮಾತ್ರ ಬಳಸುತ್ತಿದ್ದ ದುಪಟ್ಟಾ, ಈಗ ಒಂದು ಫ್ಯಾಷನ್ ಆಗಿ ಮಾರ್ಪಟ್ಟಿದೆ. ಎರಡೂ ಭುಜಗಳ ಮೇಲೆ ಹೊದೆಯುತ್ತಿದ್ದ ದುಪಟ್ಟಾ ಈಗ ಆಧುನಿಕತೆಯಿಂದಾಗಿ, ಕುತ್ತಿಗೆಯ ಸುತ್ತ ಸುತ್ತಿಹಾಕಿದಂತೆ, ಒಂದು ಹೆಗಲ ಮೇಲೆ ಪಿನ್ ಮಾಡಿ... ಹೀಗೆ ವಿಭಿನ್ನ ರೀತಿಯಲ್ಲಿ ತೊಟ್ಟುಕೊಳ್ಳುವುದು ಒಂದು ಪ್ರವೃತ್ತಿಯಾಗಿಬಿಟ್ಟಿದೆ. ಹಾಗಾಗಿ ಒಂದು ರೀತಿಯಲ್ಲಿ ದುಪಟ್ಟಾಗಳು ಬಹುಪಯೋಗಿ ವಸ್ತುವಾಗಿ ಪರಿವರ್ತನೆಯಾಗಿವೆ ಎಂದರೆ ತಪ್ಪಾಗಲಾರದು. ಹಾಗಾಗಿ, ಇಂದು ದುಪಟ್ಟಾಗಳು, ಹುಡುಗಿಯರ ಸೌಂದರ್ಯಕ್ಕೆ ವಿಶೇಷ ಮೆರುಗು ನೀಡುತ್ತಿವೆ. ಇದು ಇಲ್ಲದೇ ಹೋದರೆ ಸಾಂಪ್ರದಾಯಿಕ ಆಕರ್ಷಣೆ ಎನ್ನುವುದು ಸಂಪೂರ್ಣವೇ ಆಗುವುದಿಲ್ಲ. ಎಲ್ಲ ಹುಡುಗಿಯರಿಗೂ ಇಷ್ಟವಾಗಿ ಅವರಿಗೆ ವಿಶೇಷಲುಕ್ ನೀಡುತ್ತದೆ ಎಂದರೆ, ಅದುವೇ ದುಪಟ್ಟಾ.

ಹೆಣ್ಣುಮಕ್ಕಳೇ ಹಾಗೆ. ಒಂದೊಂದು ಉಡುಗೆಯಲ್ಲೂ ಹೊಸ ರೀತಿಯಲ್ಲಿ ಕಾಣುತ್ತಾರೆ.ಅದು ಸೀರೆಯಾಗಲಿ, ಇಲ್ಲ ಜೀನ್ಸ್ ಆಗಲಿ ಅಥವಾ ಸೆಲ್ವಾರ್ ಆಗಲಿ, ಹುಡುಗಿಯರ ಲುಕ್ ಬದಲಾಗಿಬಿಡುತ್ತದೆ. ಅದರಲ್ಲೂ ಇಂದು ಮಾರುಕಟ್ಟೆಗೆ ಲಗ್ಗೆ ಇಡುತ್ತಿರುವ ದುಪಟ್ಟಾಗಳಂತೂ ಸ್ತ್ರೀ ಭಾವನೆಯನ್ನು ನೀಡುವುದರಲ್ಲಿ ಎತ್ತಿದ ಕೈ. ಇವತ್ತು ಎಲ್ಲ ಕಾಲೇಜು ಹುಡುಗಿಯರಿಂದ ಸಿನಿಮಾ ನಟಿಯರ ತನಕ ಎಲ್ಲೆಲ್ಲೂ ದುಪಟ್ಟಾಗಳದ್ದೇ ದರ್ಬಾರು.

ನಮ್ಮ ಜೀವನಶೈಲಿ ಬದಲಾದ ಹಾಗೆ, ನಾವು ಧರಿಸುವ ಉಡುಪುಗಳ ಶೈಲಿಯೂ ಬದಲಾಗಿದೆ. ಅವುಗಳಲ್ಲಿ ಪಾಶ್ಚಾತ್ಯ ಉಡುಪುಗಳೂ ಸೇರಿವೆ. ಹಾಗಾಗಿ ಇಂದಿನ ಹುಡುಗಿಯರ ಬಳಿ ಪಾಶ್ಚಾತ್ಯ ಉಡುಪುಗಳಿರುವುದೇ ಹೆಚ್ಚು. ಆದರೂ, ಅವುಗಳ ಮಧ್ಯೆ ನಮ್ಮ ಸಾಂಪ್ರದಾಯಿಕ ಉಡುಗೆಗಳು ದುಪಟ್ಟಾಗಳಿಂದ ಹೊಸ ರೂಪ ತಳೆದು ಪ್ರಮುಖ ಆಕರ್ಷಣೆಯಾಗಿವೆ. ಅದರಲ್ಲೂ ಆಧುನಿಕತೆ ಹಾಗೂ ಸಾಂಪ್ರದಾಯಿಕತೆ ಎರಡನ್ನೂ ಮಿಕ್ಸ್

ಮ್ಯಾಚ್ ಮಾಡುವಂಥ ದುಪಟ್ಟಾಗಳು ಇಂದು ಮಾರುಕಟ್ಟೆಯಲ್ಲಿ ಲಭ್ಯವಿದ್ದು, ಕಡಿಮೆ ಬೆಲೆಯಲ್ಲಿ ನಿಮ್ಮ ಸಾಂಪ್ರದಾಯಿಕ ಉಡುಗೆಯನ್ನು ವಿನ್ಯಾಸ ಮಾಡಲು ದುಪಟ್ಟಾ ನೆರವಾಗುತ್ತದೆ.

ಇಂದು ಮಾರುಕಟ್ಟೆಯಲ್ಲಿ ವಿವಿಧ ರೀತಿಯದುಪಟ್ಟಾಗಳು ಲಭ್ಯವಿವೆ.

**ಕಲಂಕಾರಿ ದುಪಟ್ಟಾ:** ಹ್ಯಾಂಡ್‌ಪ್ರಿಂಟೆಡ್ ದುಪಟ್ಟಾಗಳು ಕಲಂಕಾರಿ ಕಲೆ ಹೆಸರಿನಲ್ಲಿ ಇಂದು ಮಾರುಕಟ್ಟೆಯಲ್ಲಿ ದೊಡ್ಡ ಟ್ರೆಂಡ್ ಸೃಷ್ಟಿ ಮಾಡಿದೆ. ಮೊಘಲ್ ಮತ್ತು ಗೋಲ್ಕೊಂಡ ಸುಲ್ತಾನರ ಈ ಕಲೆ ಹೆಚ್ಚು ಹೆಂಗಳೆಯರನ್ನು ಸೆಳೆಯುತ್ತಿದೆ. ಪರಿಶುದ್ಧವಾದ ಕಾಟನ್ ಬಟ್ಟೆಯ ಮೇಲೆ ತರಕಾರಿಗಳಿಂದ ತಯಾರಿಸಲ್ಪಟ್ಟ ಬಣ್ಣ ಅಥವಾ ನೈಸರ್ಗಿಕ ರಂಗನ್ನು ಬಳಸಿ ಪ್ರಿಂಟ್ಸ್‌ಗಳನ್ನು ಹಾಕಲಾಗುತ್ತೆ. ಇದಿಷ್ಟೇ ಅಲ್ಲದೆ ಇದರಲ್ಲಿ ಗ್ರ್ಯಾಂಡ್ ಮತ್ತು ಲೈಟ್ ಕಲರ್ ಎರಡು ರೀತಿಯ ಕಲೆಕ್ಷನ್‌ಗಳನ್ನು ನಾವಿಲ್ಲಿ ಕಾಣಬಹುದು.

**ಬಾಂದಿನಿ ದುಪಟ್ಟಾ:** ಬಾಂದಿನಿ! ಅದರ ಹೆಸರಿನಲ್ಲೇ ಅದ್ಭುತ ಭಾವನೆ ಇದೆ. ನಮ್ಮ ಭಾರತ ಕಲೆಯ ಪ್ರತೀಕ. ಎಲ್ಲಾಹೆಂಗಳೆಯರ ಮನ ಸೆಳೆಯುವ ವಿನ್ಯಾಸದ ಬಣ್ಣಬಣ್ಣದ ದುಪಟ್ಟಾಗಳು ಹುಡುಗಿಯರ ಕಣ್ಸೆಳೆಯುತ್ತವೆ.

**ಹ್ಯಾಂಡ್ ಬ್ಲಾಕ್ ಪ್ರಿಂಟ್:** ಈ ದುಪಟ್ಟಾಗಳು ಬಹಳ ಕಾಲದಿಂದಲೂ ಚಾಲ್ತಿಯಲ್ಲಿವೆ. ಇಂದಿಗೂ ಎಲ್ಲ ಫ್ಯಾಷನ್ ಹುಡುಕಾಟದ ಮನಸುಗಳ ಆದ್ಯತೆಯಾಗಿಯೇ ಉಳಿದಿದೆ. ಆಫೀಸ್‌ಗೆ ಹೋಗುವ ಮಹಿಳೆಯರು ಇದನ್ನು ಹೆಚ್ಚಾಗಿ ಬಳಸುತ್ತಾರೆ.

**ಹ್ಯಾಂಡ್‌ಲೂಮ್ ಬನಾರಸಿ ಸಿಲ್ಕ್ ದುಪಟ್ಟಾ:** ಸೀರೆಯ ಸೌಂದರ್ಯವನ್ನು ಮೆಚ್ಚುವ ಎಲ್ಲ ಹೆಣ್ಣುಮಕ್ಕಳಿಗೂ ಈ ಹ್ಯಾಂಡ್‌ಲೂಮ್ ಬನಾರಸಿ ದುಪಟ್ಟಾ ಇಷ್ಟವಾಗುತ್ತದೆ. ಆದರೆ ಬನಾರಸಿ ದುಪಟ್ಟಾಗಳು ಸ್ವಲ್ಪ ದುಬಾರಿ ಅನಿಸಿದ್ರು 'ವಾವ್' ಫೀಲ್ ಕೊಡೋದ್ರಲ್ಲಿ ಅನುಮಾನವೇ ಇಲ್ಲ. ಇದನ್ನು ಎಲ್ಲಾ ಸಾಂಪ್ರದಾಯಿಕ ಸಮಾರಂಭ ಗಳಲ್ಲೂ, ಕಾರ್ಯಕ್ರಮಗಳಲ್ಲಿಯೂ ಧರಿಸಬಹುದು.

ಂದು ಮಾರುಕಟ್ಟೆಯಲ್ಲಿ ದುಪಟ್ಟಾಗಳು ಎಲ್ಲರ ಗಮನ ಸೆಳೆಯುತ್ತಿವೆ. ಮಾಲ್‌ಗಳಲ್ಲಿ, ಶಾಪಿಂಗ್ ಸ್ಟ್ರೀಟ್‌ಗಳಲ್ಲಿ, ಜೊತೆಗೆ ಆನ್‌ಲೈನ್‌ನಲ್ಲಂತೂ ಸಖತ್ ಕಲೆಕ್ಷನ್ ಕಣ್ಣು ಕುಕ್ಕುತ್ತವೆ. ಚಿತ್ರಕಲಾ ಪರಿಷತ್, ಆರ್ಟ್ ಫೆಸ್ಟಿವಲ್‌ಗಳಲ್ಲಿ ಕಾಣಸಿಗುತ್ತವೆ. ಇನ್ನು ಉತ್ತರ ಭಾರತ ಪ್ರವಾಸಕ್ಕೆ ಹೋಗಿದ್ದೇ ಆದರೆ ಶಾಪಿಂಗ್ ಲಿಸ್ಟ್‌ನಲ್ಲಿ ದುಪಟ್ಟಾಗಳು ಮೊದಲ ಸ್ಥಾನದಲ್ಲಿ ನಿಂತು ನಗೆ ಚಿಮ್ಮುತ್ತವೆ.

ಒಟ್ಟಾರೆ ಗಾಳಿಯಲ್ಲಿ ಹಾರುತ್ತಾ ಎಲ್ಲರ ಗಮನವನ್ನೂ ಒಡತಿಯತ್ತ ಸೆಳೆಯುವ ಸ್ಸಾಹಸ ಮಾಡುವ ದುಪಟ್ಟಾಗಳು, ಮಹಿಳೆಯರ ಮನದ ಉತ್ಸಾಹ, ಚೈತನ್ಯದ ಸಂಕೇತವೆಂದರೆ ತಪ್ಪಾಗದು. ಅಲ್ಲದೆ, ಇವು ಆಧುನಿಕ ವಿನ್ಯಾಸವಾದರೂ ಸಾಂಪ್ರದಾಯಿಕವಾಗಿ ಗುರುತಿಸಿಕೊಳ್ಳುವ ಮೂಲಕ ಎಲ್ಲ ವರ್ಗದ ಜನರ ಮನಸ್ಸುಗಳನ್ನು ಗೆದ್ದಿರುವುದು ವಿಶೇಷ.

–ಭವಾನಿ



# ಗದಗದಲ್ಲಿ ಹೀಗೊಂದು ಅನ್ನಭಾಗ್ಯ

ಗದಗದಲ್ಲಿ ಸದ್ದಿಲ್ಲದೇ ಅನ್ನಭಾಗ್ಯ ಯೋಜನೆಯೊಂದು ನಡೆಯುತ್ತಿದೆ. ಐದು ರೂಪಾಯಿಗೆ ಹೊಟ್ಟೆತುಂಬ ಊಟ ಉಣಬಡಿಸುವ ಕಲ್ಪನೆ ಇದು. ಬಡವರು, ನಿರ್ಗತಿಕರು ಎನ್ನುವ ಯಾವ ತಾರತಮ್ಯ ಇಲ್ಲದೆ ಹಸಿದವರಿಗೆ ಅನ್ನ ಎನ್ನುವ ಸರಳ ಫಿಲಾಸಫಿ ಇಲ್ಲೀಗ ನೆಲೆಗೊಂಡಿದೆ.

ಸಮಾನಮನಸ್ಕರು ಸೇರಿ ಅನ್ನಪೂರ್ಣೇಶ್ವರಿ ಪ್ರಸಾದ ನಿಲಯ ರೂಪಿಸಿಕೊಂಡು ಇಂಥದೊಂದು ಸೇವೆಗೆ ನಿಂತಿದ್ದಾರೆ. ಅನ್ನ ಒಂದು ದೊಡ್ಡ ವ್ಯಾಪಾರ ಆಗಿರುವ ಜಮಾನಾ ಇದು. ಈಗ ಎಲ್ಲೆಂದರಲ್ಲಿ ರೆಸ್ಟೋರೆಂಟ್‌ಗಳು, ಹೋಟೆಲ್, ಟಿಫನ್ ಸೆಂಟರ್, ಮೆಸ್, ದರ್ಶಿನಿಗಳು. ಇಲ್ಲೆಲ್ಲ ಸೇವೆ ಒಂದು ಟ್ಯಾಗ್‌ಲೈನ್ ಅಷ್ಟೆ. ಅನ್ನ ಬಿಕರಿಯಾಗುವುದೇ ಹೆಚ್ಚು. ಇಂಥ ಬಿಕರಿ ಮನೋಭಾವದಿಂದಾಗಿಯೇ ಅನ್ನ ದುಬಾರಿ ಆಗಿದೆ. ಅಷ್ಟೇ ಅಲ್ಲ ಆರ್ಥಿಕ ಶಕ್ತಿ ಹೊಂದಿದವರಿಗಷ್ಟೇ ಕೈಗೆಟಕುವಂತಾಗಿದೆ. ಅನ್ನ ಬೆಳೆಯವ ರೈತ, ದುಡಿಯುವ ಕಾರ್ಮಿಕರು ಹಸಿವಿನಿಂದಲೇ ಆತ್ಮಹತ್ಯೆ ಮಾರ್ಗ ಹಿಡಿಯುತ್ತಿದ್ದಾರೆ!

ಇಂಥ ವಿಪರ್ಯಾಸಕ್ಕೆ ಸಣ್ಣ ಪರಿಹಾರ ಕಂಡುಕೊಳ್ಳಲು ನಡೆಸಿದ ಹುಡುಕಾಟದಲ್ಲಿ ಹೊಳೆದದ್ದು ಈ ಸೇವಾ ಉಪಾಯ. ಅನ್ನ ತುಂಬ ಸುಲಭವಾಗಿ, ಸರಳವಾಗಿ ಮತ್ತು ಸಹಜವಾಗಿ ಹಂಚಿ ಉಣ್ಣುವಂಥದ್ದು. ಇದನ್ನು ಸಾಧ್ಯವಾಗಿಸಲು ಸಮಾನ ಮನಸ್ಕ ಗೆಳೆಯರು ಸೇರಿ ರಾಮಕೃಷ್ಣ ಸೇವಾ ಪ್ರತಿಷ್ಠಾನ ಸ್ಥಾಪನೆ ಮಾಡಿದ್ದು. ಇದರ ಮೂಲಕವೇ ಅನ್ನಪೂರ್ಣೇಶ್ವರಿ ಪ್ರಸಾದ ನಿಲಯ ಕಾರ್ಯ ನಿರ್ವಹಿಸುತ್ತಿದೆ.

ಈ ಸೇವೆ ಕೇವಲ ಒಂದೂವರೆ ವರ್ಷ ಹಿಂದೆ ಶುರುವಾಗಿದೆ. ಈಗಾಗಲೇ ಒಂದೂವರೆ ಲಕ್ಷದಷ್ಟು ಜನ ಅನ್ನ ಸವಿದಿದ್ದಾರೆ. ಈ ಕಾರ್ಯವನ್ನು ಹಲವರು ಮುಕ್ತ ಕಂಠದಿಂದ ಕೊಂಡಾಡಿದ್ದಾರೆ. ಹಸಿದವರಿಗೆ ಅತ್ಯಂತ ಕಮ್ಮಿ ಬೆಲೆಯಲ್ಲಿ ಹೊಟ್ಟೆ ತುಂಬ ಊಟ ಎನ್ನುವ ಕಲ್ಪನೆಯೇ ಒಂದು ರೋಮಾಂಚನ ಮತ್ತು ಅಚ್ಚರಿ. ಆದರೆ ಇದು ಸಮಾಜದ ಸಹೃದಯರು ಪರಸ್ಪರ ಕೈಜೋಡಿಸಿದ್ದರಿಂದಾಗಿಯೇ ಸಾಧ್ಯವಾಗಿದೆ. ಇಲ್ಲಿಗೆ ಬರುವ ಹಸಿದವರು ಮತ್ತು ಹಸಿದವರು ತಿನ್ನುವುದನ್ನು ನೋಡಿ ಜೀವನದ ಸಾರ್ಥಕತೆಯನ್ನು ಕಾಣಬಯಸುವವರು ತುಂಬ ವಿಶಾಲ ಮನೋಭಾವನೆಯಿಂದ ನೆರವಾಗುತ್ತಿದ್ದಾರೆ. ಇದೇ ಯಶಸ್ಸಿಗೆ ಮೂಲಕಾರಣ. ಸರ್ಕಾರದ ಕೆಲ ಇಲಾಖೆಗಳು ಪರೋಕ್ಷ ಸಹಕಾರವನ್ನೂ ನೀಡುತ್ತಿವೆ. ಸೇವಾ ಸಂಸ್ಥೆಗಳು ನೆರವಿನ ಹಸ್ತ ಚಾಚಿದ್ದಾರೆ. ಹೀಗಾಗಿ ಈ ಕನಸು ನನಸಾಗಿದೆ ಎನ್ನುತ್ತಾರೆ ಸೇವಾಸಂಸ್ಥೆಯ ಕಾರ್ಯಾಧ್ಯಕ್ಷ ಮಂಜುನಾಥ್.

ಸೂಕ್ಷ್ಮವಾಗಿ ಗಮನಿಸಿದರೆ ಇದರಲ್ಲಿ ಹಸಿದವರ ಬಗೆಗಿನ ಬರಿಯ ಆತ್ಮಾನುಕಂಪದ ಭಾವನೆ ಕಾಣಿಸುವುದಿಲ್ಲ. ಅನ್ನ ಎಲ್ಲರಿಗೂ ದಕ್ಕಬೇಕಾದ್ದು ಮತ್ತು ಅದನ್ನು ಮಾಡುವುದುಸಾಧ್ಯವಿದೆ ಎನ್ನುವ ಸಾಮಾಜಿಕ ನ್ಯಾಯ ಪ್ರಮುಖವಾಗಿ ಧ್ವನಿಸುತ್ತದೆ. ಇಂಡಿಯಾದಂಥ ದೇಶದಲ್ಲಿ ಯಾರೂ ಹಸಿವಿನಿಂದ ನರಳಬಾರದು ಎನ್ನುವುದೇ ಸಂವಿಧಾನದ ಆಶಯ. ಇದನ್ನು ಸಾಧ್ಯವಾಗಿಸುವುದು ಪ್ರಜಾಪ್ರಭುತ್ವವಾದಿ ಸರ್ಕಾರದ, ಸಮಾಜದ ಜವಾಬ್ದಾರಿ. ಆದರೆ ಇವೆಲ್ಲ ತೋರಿಕೆಗಾಗಿ ಅಥವಾ ಪ್ರಚಾರಕ್ಕಾಗಿ ಆಗಷ್ಟು ಈಗಷ್ಟು ಯೋಜನೆಗಳ ಮೂಲಕ ಸೋಗು ಹಾಕುವುದು ಮಾತ್ರ ವಿಪರ್ಯಾಸ.

ನಗರದ ಆಸ್ಪತ್ರೆಗೆ ಸಾವಿರಾರು ರೋಗಿಗಳು ಬರುತ್ತಾರೆ. ಜತೆ ಆರೈಕೆಗೆಂದು ಮೂರ್ನಾಲ್ಕು ಜನ ಬಂದೇ ಬರುತ್ತಾರೆ. ಹಾಗೆ ಬಂದವರು ಹೆಚ್ಚಿನ ಚಿಕಿತ್ಸೆಗಾಗಿ ಆಸ್ಪತ್ರೆಯ ವಾರ್ಡ್‌ಗಳಲ್ಲಿ ತಂಗುತ್ತಾರೆ. ಅಂಥವರಿಗೆ ಊಟದ ವ್ಯವಸ್ಥೆ ಮಾಡುವುದು ಮತ್ತು ಅದರ ಖರ್ಚು ವೆಚ್ಚ ನಿಭಾಯಿಸುವುದು ಎರಡೂ ಕಷ್ಟದ ಕೆಲಸ. ಇದನ್ನು ನೀಗಿಸಲೆಂದೇ ಈ ಸೇವಾಸಂಸ್ಥೆ ಅಂಥವರಿಗೆ ಉಚಿತ ಅನ್ನ ಸಂತರ್ಪಣೆ ಮಾಡುತ್ತಿದೆ. ಇದರಿಂದ ಸಾವಿರಾರು ಜನರಿಗೆ ಸಹಾಯವಾಗುತ್ತಿದೆ ಎಂದು ಸ್ಥಳೀಯರು ಕೂಡ ಪ್ರಶಂಸೆ ಮಾಡುತ್ತಾರೆ.

ಶಾಲೆ, ಕಾಲೇಜುಗಳಲ್ಲಿ ಓದುವ ಹೆಣ್ಣುಮಕ್ಕಳಿಗೆಂದು ಕೇವಲ ಎರಡು ರೂಪಾಯಿಗೆ ಹೊಟ್ಟೆ ತುಂಬ ಊಟ ನೀಡಲಾಗುತ್ತಿದೆ. ಇದಕ್ಕೂ ಪ್ರತಿಕ್ರಿಯೆ ಚೆನ್ನಾಗಿದೆ. ಓದಲೆಂದೇ ಹಳ್ಳಿಗಳಿಂದ ನಗರಕ್ಕೆ ಬರುವ ಹೆಣ್ಣುಮಕ್ಕಳಿಗೆ ನೆರವಾಗುವ ಉದ್ದೇಶ ಇದಾಗಿದೆ ಎಂದೂ ಸಂಘಟಕರು ಹೇಳುತ್ತಾರೆ.

ಎಷ್ಟೋ ಜನರ ಮದುವೆ ಸಮಾರಂಭ, ಜನ್ಮ ದಿನಾಚರಣೆ ಅಥವಾ ಇನ್ನಾವುದೇ ಶುಭ ಕಾರ್ಯಗಳಲ್ಲಿ ಭರ್ಜರಿ ಭೋಜನ ವ್ಯವಸ್ಥೆಯನ್ನು ನಾವು ಕಾಣುತ್ತೇವೆ. ಆಗ ಸಾಕಷ್ಟು ಅನ್ನವನ್ನೂ ಹಾಳುಗೆಡಿಸುವುದೂ ಇದೆ. ಅದರ ಬದಲಿಗೆ ಹಸಿದವರಿಗೆಂದೇ ರೂಪಿಸಿದ ಈ ಅನ್ನ ಸಂತರ್ಪಣೆಗೆ ನೆರವಾಗುವ ಮೂಲಕ ಜೀವನದ ಸಾರ್ಥಕತೆಯನ್ನು ಕಾಣಬಹುದಲ್ಲವೇ ಎನ್ನುವುದು ಪ್ರತಿಷ್ಠಾನದ ಸಂದೇಶ. ಇದಕ್ಕೆ ಹಲವರು ಸ್ಪಂದಿಸುತ್ತಿದ್ದಾರೆ ಕೂಡ.

ಕಳೆದ ರಂಜಾನ್ ಉಪವಾಸ ಆಚರಣೆಯ ಸಂದರ್ಭದಲ್ಲಿ ಮುಸಲ್ಮಾನರಿಗೆಂದೇ ವಿಶೇಷ ಭೋಜನದ ವ್ಯವಸ್ಥೆ ಮಾಡಲಾಗಿತ್ತು. ಷೀರ್‌ಖುರ್ಮಾ ವಿತರಿಸಿ ಈ ವರ್ಷದ ಈದ್ ಅನ್ನು ವಿಶೇಷವಾಗಿ ಆಚರಿಸುವ ಮೂಲಕ ಸಂಸ್ಥೆ ಸಮಾಜಕ್ಕೆ ಸಾಮರಸ್ಯದ ಗಟ್ಟಿ ಸಂದೇಶವನ್ನು ನೀಡಿದಂತಾಗಿದೆ.

ಒಟ್ಟಾರೆ ಈ ಸೇವಾ ಕೈಂಕರ್ಯಕ್ಕೆ ತಗಲುವ ಖರ್ಚು ವೆಚ್ಚಗಳನ್ನು ಅತ್ಯಂತ ಪಾರದರ್ಶಕವಾಗಿ ನೋಡಿಕೊಳ್ಳುವ ವ್ಯವಸ್ಥೆಯನ್ನು ಸಂಸ್ಥೆ ಹೊಂದಿದೆ. ಯಾವ ಸಂದರ್ಭದಲ್ಲೂ ಲೆಕ್ಕ ನೀಡಲು ಈ ಸಂಸ್ಥೆ ಸಿದ್ಧ.ಅತ್ಯಂತ ಪ್ರಾಂಜಲ ಮನಸ್ಸಿನ ಸೇವಾಕಾಂಕ್ಷಿಗಳು ಇದರ ಹಿಂದಿರುವುದರಿಂದ ಈ ಕೈಂಕರ್ಯ ಜನಪ್ರಿಯಗೊಂಡಿದೆ. ಇದರಿಂದ ಸಂಸ್ಥೆಯ ಕೆಲಸ ಇನ್ನಷ್ಟು ಹಗುರವಾಗಿದೆ. ದಾನಿಗಳ ಸಂಖ್ಯೆಯೂ ಹೆಚ್ಚಿದೆ ಎನ್ನುತ್ತಾರೆ ಮಂಜುನಾಥ್.

ಎಲ್ಲ ಧರ್ಮದ ಮುಖಂಡರು, ಸಮಾಜದ ಗಣ್ಯರು ಮತ್ತು ಇದರ ಬಗ್ಗೆ ಕೇಳಿ ತಿಳಿದವರು ಹಣ ಮತ್ತು ದವಸ ಧಾನ್ಯಗಳನ್ನು ದಾನವಾಗಿ ನೀಡುತ್ತಿದ್ದಾರೆ. ದಿನದಿಂದ ದಿನಕ್ಕೆ ಇಲ್ಲಿ ಊಟ ಮಾಡುವವರ ಸಂಖ್ಯೆಯೂ ಹೆಚ್ಚಿರುವುದು ಇದರ ಮಹತ್ವವನ್ನು ಮತ್ತು ಸಾರ್ಥಕ ಭಾವವನ್ನು ಸಾರಿ ಸಾರಿ ಹೇಳುತ್ತಿದೆ.

ಇಲ್ಲಿ ಸ್ವೀಕರಿಸುವ ಐದು ರೂಪಾಯಿ ಅಥವಾ ಎರಡು ರೂಪಾಯಿ ಶುಲ್ಕ ಸೇವಾ ಸೌಲಭ್ಯಗಳನ್ನು ಒದಗಿಸುವುದಕ್ಕೆ ಮತ್ತು ಅದರ ನಿರ್ವಹಣೆಗಾಗಿ ಮಾತ್ರ. ಇದರಿಂದ ಯಾವುದೇ ಆರ್ಥಿಕ ಲಾಭವನ್ನು ಸಂಸ್ಥೆ ನಿರೀಕ್ಷಿಸುತ್ತಿಲ್ಲ ಎನ್ನುವುದು ಗಮನಾರ್ಹ ಅಂಶ.

–ದಿಲ್





# ಬೆಂಗಳೂರಿನ ನಿರ್ಮಾತೃ ಕೆಂಪೇಗೌಡರು

**ಪ್ರೊ. ಬಿ. ನಾರಾಯಣಮ್ಮ**





ಶ್ರೀ ಮರಿಮಲ್ಲಯ್ಯ

ಕೆಂಪೇಗೌಡರ ಸೊಸೆ ಲಕ್ಷ್ಮೀದೇವಿ ಮೊದಲ ಗಂಡುಮಗುವಿನ ನಂತರ ಮತ್ತೆ ಗರ್ಭಿಣಿಯಾಗಿದ್ದಳು. ಲಕ್ಷ್ಮೀದೇವಿ ಮಾವನವರ ಚಿಂತೆ ದೂರ ಮಾಡಲು ತಾನೇ ಬಲಿಯಾಗಲು ನಿರ್ಧರಿಸಿದಳು. ಅಂದಿನ ರಾತ್ರಿ ಬಹಳ ಹೊತ್ತು ಪೂಜಾಮಂದಿರದಲ್ಲಿಯೇ ಇದ್ದುಪ ರಾರ್ಥನೆ ಮಾಡುತ್ತಿದ್ದರು ಕೆಂಪೇಗೌಡರು. ಮಧ್ಯರಾತ್ರಿಯಲ್ಲಿ ತನ್ನ ಪತಿಯ ಕಾಲುಗಳಿಗೆ ನಮಸ್ಕರಿಸಿ ತನ್ನ ಮಗುವಿಗೆ ಆಶೀವದಿಸಿ, ಸದ್ದಾಗದಂತೆ ಕೋಟೆಯ ಬಳಿಗೆ ಬಂದಳು. ಅಲ್ಲಿ ಕಾವಲಿದ್ದ ಭಟರು ಹಾಗೂ ವೀರಣ್ಣಗೌಡರು ಜೊಂಪು ಹತ್ತಿ ನಿದ್ದೆಗೆ ಜಾರಿದ್ದರು. ಕೋಟೆಯ ಬಾಗಿಲ ಹತ್ತಿರ ಬಂದು, 'ತಾಯಿ ಕೆಂಪಾಂಬೆ, ನನ್ನ ಬಲಿದಾನವನ್ನು ಸ್ವೀಕರಿಸು. ಬೆಂಗಳೂರು ಚಿರಸ್ಥಾಯಿಯಾಗಿ ಕೀರ್ತಿಶಿಖರವೇರಲಿ' ಎಂದು ಹೇಳುತ್ತಾ ತನ್ನ ರುಂಡವನ್ನು ಕೊಡಲಿಯಿಂದಕತ್ತರಿಸಿಕೊಂಡಳು. ರಕ್ತ ಚಿಮ್ಮಿ ದ್ವಾರಕ್ಕೆ ಅಭಿಷೇಕವಾಯಿತು.

ಕೆಂಪೇಗೌಡರು ಬೆಳಿಗ್ಗೆ ಬೇಗನೇ ಎದ್ದು ಕೋಟೆ ನೋಡಲು ಹೊರಟರು. ದೂರದಿಂದಲೇ ಬಾಗಿಲು ಬೀಳದೆ ನಿಂತಿರುವುದನ್ನು ಕಂಡು ಸಂತೋಷಪಟ್ಟರು. ಹತ್ತಿರ ಬಂದು ನೋಡಿದಾಗ ಅವರಿಗೆ ಆಘಾತವಾಯಿತು. ಸೊಸೆ ಕೋಟೆಯ ಬಾಗಿಲು ನಿಲ್ಲಲು ತನ್ನ ಪ್ರಾಣವನ್ನೇ ಬಲಿಕೊಟ್ಟಿದ್ದನ್ನು ನೋಡಿ ''ಅಯ್ಯೋ ಇದೇನಾಯಿತು? ನನ್ನ ಮಗಳೇ ಹೀಗೇಕೆ ಮಾಡಿದೆ? ನಾನು ಯಾರನ್ನೂ ಬಲಿ ಕೊಡಬಾರದೆಂದಿದ್ದೆ'' ಎಂದು ದುಃಖದ ಮಡುವಿನಲ್ಲಿ ಮುಳುಗಿದರು. ಇಮ್ಮಡಿ ಕೆಂಪೇಗೌಡರಂತೂ ಕುಸಿದು ಕುಳಿತರು. ''ಮಹಾತಾಯಿ ತಾನು ಬಲಿಯಾಗಿ ಕೋಟೆಯ ಬಾಗಿಲು ನಿಲ್ಲಿಸಿದಲು. ಇಂತಹ ಹೆಣ್ಣುಮಗಳನ್ನು ಹಡೆದವರು, ಸೊಸೆಯಾಗಿ ಪಡೆದ ಕೆಂಪೇಗೌಡರು, ಪತ್ನಿಯಾಗಿ ಪಡೆದ ಇಮ್ಮಡಿ ಕೆಂಪೇಗೌಡರು ಧನ್ಯರು'' ಜನರೆಲ್ಲಾ ಲಕ್ಷ್ಮೀದೇವಿಯನ್ನು ಶ್ಲಾಘಿಸಿದರು.

**ಲಕ್ಷ್ಮೀದೇವಿಯ ಸ್ಮಾರಕ:** ಲಕ್ಷ್ಮೀದೇವಿಯನ್ನು ಆಕೆಯ ತವರೂರಾದ ಬೆಂಗಳೂರಿನ ಪೂರ್ವದಿಕ್ಕಿನ್ಲಿರುವ ಕೋರಮಂಗಲದಲ್ಲಿ ಸಮಾಧಿ ಮಾಡಲಾಯಿತು. ಕೆಂಪೇಗೌಡರು ಲಕ್ಷ್ಮೀ ದೇವಾಲಯವನ್ನು ಕಟ್ಟಿಸಿ ಪೂಜೆಗಾಗಿ ನೂರಾರು ಎಕರೆ ಜಮೀನನ್ನು

ನೀಡಿದರು.

**ರಾಜಧಾನಿಯಾಗಿ ಬದಲಾವಣೆ:** ಬೆಂಗಳೂರು ನಗರ ನಿರ್ಮಾಣ ಹಾಗೂ ಕೋಟೆಯನ್ನು ಕಟ್ಟಿದ ನಂತರ ರಾಜಧಾನಿಯನ್ನು ಕೆಂಪೇಗೌಡರು ಯಲಹಂಕದಿಂದ ಬೆಂಗಳೂರಿಗೆ ಬದಲಾಯಿಸಿದರು.

**ಅಣ್ಣಮ್ಮ ದೇವಿಯ ದೇವಸ್ಥಾನ:** ಕೆಂಪೇಗೌಡರು ಆದಿಶಕ್ತಿ ಕೆಂಪಾಂಬಿಕೆಯ ದೇವಸ್ಥಾನವನ್ನು ಕಟ್ಟಿಸಿದರು. ಆ ದೇವಸ್ಥಾನಕ್ಕೆ ಇಂದು ಅಣ್ಣಮ್ಮ ದೇವಿಯ ದೇವಸ್ಥಾನವೆಂದು ಪ್ರಖ್ಯಾತವಾಗಿದೆ.

**ಗಡಿ ಚಿಹ್ನೆಯಾಗಿ ಗೋಪುರಗಳು:** ಕೆಂಪೇಗೌಡರು ಬೆಂಗಳೂರಿನ ನಾಲ್ಕು ದಿಕ್ಕುಗಳಲ್ಲಿ ನಾಲ್ಕು ಗೋಪುರಗಳನ್ನು ಗಡಿಸೂಚಕವಾಗಿಕಟ್ಟಿಸಿದರು. ಪೂರ್ವದ ಗೋಪುರವು ಅಲಸೂರಿನ ಕೆರೆಯ ಹತ್ತಿರ, ಉತ್ತರದ ಗೋಪುರವು ಹೆಬ್ಬಾಳದಲ್ಲಿ, ದಕ್ಷಿಣದ ಗೋಪುರವು ಲಾಲ್‌ಬಾಗಿನಲ್ಲಿ ಮತ್ತು ಪಶ್ಚಿಮದ ಗೋಪುರವು ಕೆಂಪಾಂಬುಧಿ ಕೆರೆಯ ಹತ್ತಿರವಿದೆ. ಅಲ್ಲದೆ ಇನ್ನೊಂದು ಗೋಪುರವು ಬಸವೇಶ್ವರ ದೇವಸ್ಥಾನದ ಹಿಂದೆ ಇದೆ. ಕೆಂಪೇಗೌಡರು ಈ ಆಶಿಸಿದ್ದರು. ಅದು ಆ ಗಡಿ ದಾಟಿದೆ. ಬೆಂಗಳೂರು ಬೃಹದಾಕಾರವಾಗಿ ಬೆಳೆದಿದೆ.

ಗಂಗಾಧರೇಶ್ವರ, ಸ್ವರ್ಣಾಂಬೆ (ಹೊನ್ನಾದೇವಿ) ದೇವಾಲಯಗಳಿಗೆ ಗರ್ಭಗೃಹ, ಯಾಗಶಾಂತಿ, ಕಲ್ಯಾಣಮಂಟಪ, ಪಡಸಾಲೆ, ಹಜಾರಗಳನ್ನು ವಿಶಾಲವಾಗಿ ಸುಂದರವಾಗಿ ಕಟ್ಟಿಸಿದರು. ದೇವಸ್ಥಾನದ ಪೂರ್ವದಲ್ಲಿರುವ ದೊಡ್ಡ ಹಜಾರವನ್ನು ಈಗಲೂ ''ಕೆಂಪೇಗೌಡರ ಹಜಾರ'' ಎಂದು ಕರೆಯುತ್ತಾರೆ. ಕೆಂಪೇಗೌಡರ ಪ್ರತಿಮೆ ಅಲ್ಲಿದೆ. ಇವರು ಭಾರತದ ಶ್ರೇಷ್ಠ ಅರಸರಲ್ಲಿ ಒಬ್ಬರು. ದಕ್ಷ ಆಡಳಿತಗಾರರು. ಪ್ರಜೆಗಳನ್ನು ತಮ್ಮ ಮಕ್ಕಳಂತೆ ಪ್ರೀತಿಸುತ್ತಿದ್ದರು.

ಇವರು ದಾನದಲ್ಲಿ ಶಿಬಿ ಚಕ್ರವರ್ತಿಯಂತೆ, ಸತ್ಯದಲ್ಲಿ ಹರಿಶ್ಚಂದ್ರನಂತೆ, ಕರುಣೆಯಲ್ಲಿ ಧರಿತ್ರಿಯಂತೆ, ತಾಳ್ಮೆಯಲ್ಲಿ ಸಾಗರದಂತೆ, ಸ್ಥೈರ್ಯದಲ್ಲಿ ಹಿಮಾಲಯ ಪರ್ವತದಂತೆ ಇದ್ದರು. ಕೆಂಪೇಗೌಡರು ಭೈರವೇಶ್ವರ ಮುದ್ರೆಯ ನಾಣ್ಯಗಳನ್ನು ಟಂಕಿಸಿ ಸ್ವತಂತ್ರವಾಗಿ ಚಲಾವಣೆಗೆ ತಂದರು. ಇವರು ಸ್ವತಂತ್ರರಾಗುತ್ತಿದ್ದಾರೆಂದು ಸುತ್ತಮುತ್ತಲಿನ ಪಾಳೆಯಗಾರರು ವಿಜಯನಗರ ಸಾಮ್ರಾಜ್ಯ ಸಾಮ್ರಾಟರಾದ ಅಳಿಯ ರಾಮರಾಯರಿಗೆ ದೂರು ಕೊಂಡೊಯ್ದರು. ಸಾಮ್ರಾಟರು ಗೌಡರನ್ನು ಕರೆಸಿಕೊಂಡು ಆನೆಗೊಂದಿಯ ಸೆರೆಮನೆಗೆ ಹಾಕಿದರು. ಕೆಂಪೇಗೌಡರ ರಾಜ್ಯವು ರಾಮರಾಯರ ವಶವಾಯಿತು. ಐದು ವರ್ಷಗಳಕಾಲ ಸೆರೆಯಲ್ಲಿರಬೇಕಾಯಿತು. ಅಧಿಕ ಮೊತ್ತದ ಹಣವನ್ನು ಕೊಟ್ಟು ಸೆರೆಯಿಂದ ಬಿಡುಗಡೆ ಹೊಂದಿದರು. ರಾಜ್ಯವೂ ಮರಳಿ ದೊರೆಯಿತು.

ಕೆಂಪೇಗೌಡರ ಆಳ್ವಿಕೆಯಲ್ಲಿ ರಾಜ್ಯವು ಸುಭಿಕ್ಷವಾಗಿತ್ತು. ಇವರಿಗೆ ''ಪ್ರಜಾವತ್ಸಲ, ಅರಿಗಳಿಗೆ, ನಿಸ್ಸೀಮ, ದೈವಭಕ್ತ, ಗಂಡಭೇರುಂಡ, ಸ್ವಾಮಿಭಕ್ತ'' ಎಂಬ ಬಿರುದುಗಳಿದ್ದವು.

(ಮುಗಿಯಿತು)





**Miss World 2017 - Manushi Chillar**






She is the daughter of Sri Mitra Basu Chillar and Smt. Neelam Chillar of Sonipat, Haryana. Miss World is a very good dancer and also a medical student. After 17 years, Miss World again came to India.

She is born in family of doctors and she is heart specialist and her ambition is to do the help for the poor people. Mahila Vishesha Balaga congratulates Manushi Chillar.



**Welcome to Ivanka Trump!**

Recently our Prime Minister welcomed to American President's Daughter Ivanka Trump at Hyderabad. She attended a conference and told that she is satisfied about India.

**ಶ್ರೀಮತಿ ಕೆ. ರತ್ನಪ್ರಭಾರವರಿಗೆ ಉನ್ನತ ಹುದ್ದೆ**

ಕರ್ನಾಟಕ ರಾಜ್ಯ ಸರ್ಕಾರ ಹಿರಿಯ ಐಎಎಸ್ ಶ್ರೇಣಿ ಅಧಿಕಾರಿ ಶ್ರೀಮತಿ ಕೆ. ರತ್ನಪ್ರಭಾರವರನ್ನು ನೂತನ ಮುಖ್ಯ ಕಾರ್ಯದರ್ಶಿಯಾಗಿ ನೇಮಕಾತಿ ಆದೇಶವನ್ನು ಹೊರಡಿಸಿದೆ. ಇವರು ಮೂಲತಃ ಆಂಧ್ರಪ್ರದೇಶದವರಾಗಿದ್ದು 1981ರ ಐಎಎಸ್ ಬ್ಯಾಚ್‌ನ ಅಧಿಕಾರಿ. ಇವರು ಉತ್ತರ ಕರ್ನಾಟಕ ಭಾಗದಲ್ಲಿ ಹೆಚ್ಚಿನ ಸೇವೆಯನ್ನು ಸಲ್ಲಿಸಿದ್ದಾರೆ. ಕನ್ನಡ ಭಾಷೆಯನ್ನು ಲೀಲಾಜಾಲವಾಗಿ ಮಾತನಾಡಲು, ಓದಲು, ಬರೆಯಲು ಕಲಿತಿದ್ದಾರೆ. ಒಬ್ಬ ಮಹಿಳೆಗೆ ಈ ಹುದ್ದೆ ದೊರೆತಿರುವುದು ಹೆಮ್ಮೆಯ ವಿಷಯ ಹಾಗೂ ಇವರ ಸೇವೆಯು ಎಲ್ಲರ ಪ್ರಶಂಸೆಗೆ ಒಳಗಾಗಲಿ ಎಂದು ಮ.ವಿ. ಬಳಗ ಶುಭವನ್ನು ಕೋರಿದೆ.



# ನಿಮ್ಮ ಪ್ರಶ್ನೆಗೆ ನಮ್ಮ ಉತ್ತರ

**ಸರ್ವಮಂಗಳ, ಮೈಸೂರು**

ದೇವರು, ಧರ್ಮಗಳಬಗ್ಗೆ ನೀವೇನಂತೀರಿ,

*ನೀವೆಲ್ಲರೂ ಹ್ಯಾಗೆ ಹೇಳ್ತೀರೋ ಹಾಗೆ ನಂದೂನು.*

**ಮೋಹನಾಂಗಿ, ಮೈಸೂರು**

ಮಗಳು ತಪ್ಪು ಮಾಡಿದರೆ ತಾಯಿ ಕ್ಷಮಿಸುತ್ತಾಳೆ, ಆದರೆ ಸೊಸೆ ತಪ್ಪು ಮಾಡಿದ್ರೆ ಕ್ಷಮಿಸೋಲ್ಲ, ಏಕೆ?

*ಮೊದಲನೆಯದು ತಾಯಿ ಪಾತ್ರ, ಎರಡನೆಯದು ಅತ್ತೆಯ ಪಾತ್ರ!*

**ಪ್ರೇಮ್ ಕುಮಾರ್, ಹಾಸನ**

ಭಗ್ನಪ್ರೇಮಿಗಳ ಸಂಘಕ್ಕೆ ಸೇರಲು ಅರ್ಹತೆ ಏನಿರಬೇಕು?

*ವೆರಿಸ ಇಂಪಲ್, ಪ್ರೇಮಿಸಿರಬೇಕು ಹಾಗೂ ಅದು ಭಗ್ನವಾಗಿರಬೇಕಷ್ಟೆ!*

**ನಾರಾಯಣ, ಚಿತ್ತೂರು**

ಸ್ವರ್ಗದಲ್ಲಿ ನರಕ ಕಾಣುವವರಿಗೆ ಏನು ಹೇಳಬೇಕು?

*ಸ್ವರ್ಗಸ್ಥರಾಗಿ ಅನ್ನಬೇಕು. ಅಂಥವರಿಗೆ ನರಕವೇ ಸ್ವರ್ಗ!*

**ಅಂಜನಪ್ಪ, ಶಿವಮೊಗ್ಗ**

ಜ್ಯೋತಿಷಿಯ ಭವಿಷ್ಯದ ನುಡಿಹಾಗೂ ರಾಜಕಾರಣಿಯ ಚುನಾವಣಾ ಆಶ್ವಾಸನೆಯಲ್ಲಿ ಸತ್ಯ ಯಾವುದು?

*ಎರಡೂ ಸಹ ಸತ್ಯಕ್ಕೆ ಹತ್ತಿರವಿದ್ದಂತೆ ಗೋಚರಿಸುವ ಅಪ್ಪಟ ಸುಳ್ಳುಗಳು!*

**ತುಕಾರಾಂ, ಕೋಲಾರ**

ಇರುವುದೆಲ್ಲವ ಬಿಟ್ಟು ಇರದುದರೆಡೆಗೆ ತುಡಿವುದೇ ಜೀವನ ಅಂದರೇನು?

*ಬರುವವಳನ್ನು ನಂಬಿ ಇರುವವಳನ್ನು ಬಿಟ್ಟ ಹಾಗೆ!*

**ಸ್ಯಾಮುಯೆಲ್, ಮದ್ರಾಸು (ಚೆನ್ನೈ)**

ಸಾವಿನ ನಂತರದ ಜಗತ್ತು ಹೇಗಿರುತ್ತೆ?

*ಒಳ್ಳೆಯ ಪ್ರಶ್ನೆ ಆದರೆ ಉತ್ತರ ಕೇಳೋಣ ಅಂದ್ರೆ, ಮೊದಲನೆ ಸಲ ಹೋದವರೇ ಇನ್ನೂ ತಿರುಗಿ ಬಂದಿಲ್ಲ!*

**ಗೋಪಾಲ ಜೋಷಿ, ಧಾರವಾಡ**

ಕೆಲ ಕೈದಿ, ಕೊಲೆಗಡುಕರಿಗೇಕೆ ರಾಜಾತಿಥ್ಯ?

*ಭವಿಷ್ಯದಲ್ಲಿ ಅವರೇ ಪಟ್ಟಕ್ಕೆ ಬರುವ ಎಲ್ಲ ಸಾಧ್ಯತೆಗಳಿರುವುದರಿಂದ!*

**ಪಾಂಡುರಂಗ, ಪಂಡರಾಪುರ**

ಸೋತು ಗೆಲ್ಲುವವನನ್ನು ಗಂಡು ಎನ್ನುವುದಾದರೆ ಸೋಲುತ್ತಲೇ ಇರುವವರನ್ನು ಏನೆನ್ನಬೇಕು?

*ಬರಿ ಗಂಡ ಎನ್ನಬಹುದು!*

**ಭ್ರಮರಾಂಬ, ಬೆಂಗಳೂರು**

ಭ್ರಮೆಗೂ ವಾಸ್ತವಕ್ಕೂ ಇರುವ ವ್ಯತ್ಯಾಸವೇನು ಹೇಳುವಿರಾ?

*ನಮಗೆ ತಿಳಿದಿರುವ ಬಹಳ ಸಂಗತಿಗಳು ಭ್ರಮೆ ಅನ್ನೋದೇ ಹೆಚ್ಚು ವಾಸ್ತವ!*



# ಯಮಲೋಕದಲ್ಲಿ ಪತ್ರಕರ್ತ



(ಹಿಂದಿನ ಸಂಚಿಕೆಯಿಂದ)

ಇಂದ್ರ: ಇದೇನ್ ಫಿಷ್ ಮಾರ್ಕೆಟ್ ಅಂದ್ಕೊಂಡ್ರಾ. ನಾನು ನಾನು ಎಂದು ಹೊಡ್ಕೊಳಕೆ ಮರ್ಯಾದೆಯಿಂದ ಪೂರ್ತಿ ಹೇಳಿ ತೊಲಗಿ ಎಂದು ಗುಡುಗಿದ.

ಯಮಭಂಟರು: ಯಮರಾಜನ ಹದಿಹರೆಯದ ತುಂಬು ಯೌವನ ವಯ್ಯಾರಿ ಬೆಡ್ ಮೇಲೆ ಕುಳಿತು...

ಇಂದ್ರ: ಮೇಲೆ ಕುಳಿತು ಮೇಲೆ ಕುಳಿತು ಅಂತ ಯಾಕ್ರಯ್ಯಾ ಪ್ರಾಣ ತಿಂತಿರಾ?

ನಾರದ: ನಾರಾಯಣ ನಾರಾಯಣ ನಾರಾಯಣ ಅಂತ ಇಂದ್ರ ಸಭೆ ಪ್ರವೇಶಿಸಬೇಕೆ.

ಇಂದ್ರ: ಥತ್ ಈ ಸನ್ಯಾಸಿ ನನ್ಮಗ ಒಳ್ಳೆಯ ಥಿಯರಿಯೇ ಹೇಳುತ್ತಿದ್ರೆ, ಅಷ್ಟರಲ್ಲಿ ಬಂದು ಸಭೇನೇ ಹಾಳ್ಮಾಡ್ತಾನೆ ಈ ಬಡ್ಡೀಮಗ. ನಾರದರು ಬಂದಿರುವುದನ್ನು ಗಮನಿಸಿದ್ದರೂ ಗಮನಿಸದಂತೆ ಯಮಭಂಟರನ್ನು ಕುರಿತು ನೀವು ಆ ರೂಂನಲ್ಲಿ ಕುಂತಿರಿ. ಬರ್ತೀನಿ ಎಂದು ಹೇಳಿ ಕಳುಹಿಸಿದ.

ಯಮಭಂಟರು ತ್ರಿಲೋಕ ಸಂಚಾರಿಗಳಿಗೆ ನಮಸ್ಕಾರ ಮಾಡಿ ಹೊರಟುಹೋದರು.

ನಾರದ: ನಾರಾಯಣ ನಾರಾಯಣ ಅಂತ ಹೇಳಿ ಇಂದ್ರಸಭೆಯಿಂದ ಹೊರ ಹೊರಟರು. ಇನ್ನೂ ಸ್ವಲ್ಪ ಅಲ್ಲೇ ಇದ್ದಿದ್ದರೆ ಮುಖಕ್ಕೆ ಮಂಗಳಾರತಿ ಎತ್ತಿಬಿಡುತ್ತಿದ್ದರು.

ಇಂದ್ರ: ಯಮನ ಸಂಪೂರ್ಣ ಬೆಡ್ ಮಾಹಿತಿ ತಿಳಿಯಲು ಯಮಭಂಟರನ್ನು ಹುಡುಕಿಕೊಂಡು ಯಮಪುರಿಯತ್ತ ಪುಷ್ಪಕ ವಿಮಾನ ಹತ್ತಿದರು. ಮಾರ್ಗಮಧ್ಯ ರಾಮಸಿಂಹಯ್ಯನನ್ನು ಕಂಡು ಏಯ್ ಬಾರೋ ಇಲ್ಲಿ ಎಂದು ಕರೆದು ನಾಲ್ಕೈದು ಜನ ಯಮಭಂಟರನ್ನು ಕಂಡೆಯಾ ಎಂದರು.

ಪತ್ರಕರ್ತ: ರಾಮಸಿಂಹಯ್ಯನಿಗೆ ಅಂದು ಇಂದ್ರಸಭೆಯಲ್ಲಿ ಆದ ಅವಮಾನ ನೆನಪಿಗೆ ಬಂತು. ಇವತ್ತು ಈ ನನ್ಮಗನ್ಗೆ ಪಾಠ ಕಲಿಸ್ಬೇಕು ಎಂದು ನಿರ್ಧರಿಸಿದ. ಮಹಾಪ್ರಭು ಅಪ್ಪಣೆಯಾಗಲಿ. ನಾಲ್ಕೈದು ಜನ ಇಲ್ಲೇ ನಂಜೊತೆ ಗಣೇಶ ಬೀಡಿ ಸೇದುತ್ತಿದ್ರು. ಬರ್ತೀನಿ ಇರಿ ಅಂತ ಹೋಗಿದ್ದಾರೆ. ಕೂತ್ಕೊಳ್ಳಿ ಬರ್ತಾರೆ. ಪ್ರಭು ನೀವು ಯಾವ ದೇಶದ ರಾಜರು ಚಾಚೂ ತಪ್ಪದೆ ಹೇಳುವಿರಾ?

ಇಂದ್ರ: ನಾನು ಸ್ವರ್ಗಲೋಕದ ಒಡೆಯ. ನನ್ನನ್ನು ದೇವೇಂದ್ರನೆಂದು ಕರೆಯುತ್ತಾರೆ.

ಪತ್ರಕರ್ತ: ನಿನ್ನ ಬಣ್ಣ ಈಗ ಬಯಲು ಮಾಡ್ತೀನಿ ಇರು ನನ್ಮಗನೆ. ನೀನು ಯಾಕೆ ಬಂದಿದೀಯಾಂತ ನಂಗೊತ್ತು. ನಿನ್ನ ಕೈಲೇ ಬಾಯಿ ಬಿಡಿಸ್ತೀನಿ. ನಿಂಗೆ ನೇಣು ಹಾಕ್ತೀನಿ. ರಾಮಸಿಂಹಯ್ಯ ಮತ್ತೆ ಹೇಳಿ ಪ್ರಭುಗಳೆ ಎಂದನು.

ಇಂದ್ರ: ನಾನು ಯಮಭಂಟರುಗಳನ್ನು ಹುಡುಕಿಕೊಂಡು ಬಂದಿರುವೆ.

ರಾಮಸಿಂಹಯ್ಯ: ಪ್ರಭುಗಳೇ ಹುಡುಕಿಕೊಂಡು ಬಂದ ಕಾರಣ?

ಇಂದ್ರ: ಯಮಭಂಟರು ನನ್ನ ಸ್ವರ್ಗಲೋಕಕ್ಕೆ ಬಂದು ಯಮನು ಮತ್ತು ಸುಂದರ ತರುಣಿ ಇರುವ ವೃತ್ತಾಂತವನ್ನು ಅರ್ಧ ಹೇಳಿ ಹೋಗಿದ್ದಾರೆ. ಇದರ ಪೂರ್ಣ ಮಾಹಿತಿ

ಪಡೆಯಲು ಅವರನ್ನು ಹುಡುಕಿಕೊಂಡು ಇಲ್ಲಿಗೆ ಬಂದೆ. ನಿನಗೇನಾದರೂ ಸಿಕ್ಕರೆ ನನ್ನ ಅರಮನೆಗೆ ಕಳುಹಿಸು. ನಿನಗೆ ಬಹುಮಾನ ಕೊಡ್ತೀನಿ.

ರಾಮಸಿಂಹಯ್ಯ: ಕಕ್ಕಾಬಿಕ್ಕಿಯಾಗಿ ತುಸು ಯೋಚಿಸಿ, ಅಲೆಲೆಲೆ ನೀನು ನನಗೆ ಬಹುಮಾನ ಕೊಡ್ತ್ಯಾ? ನಾನು ನಿನ್ನಿಂದ ಬಹುಮಾನ ಪಡೀಬೇಕಾ? ಇರು ನಾನು ನಿಂಗೆ ಜಾಪಾಳ ಮಾತ್ರೆ ಕೊಟ್ಟು ಚಕ್ ಶಾಂಪೂ ಕುಡಿಸ್ತೀನಿ. ನಿನ್ನ ಸ್ವರ್ಗಲೋಕ, ನಮ್ಮ ಯಮಪಟ್ಟಣದಂತೆ ಆಗಿ ಅದರ ಮೇಲೆ ನಿನ್ನ ಕೂರಿಸ್ತೀನಿ.

ಇಂದ್ರ: ನಿಮ್ಮ ಹೆಸ್ರೇನು, ನಿನ್ನ ಎಲ್ಲೋ ನೋಡಿದ್ದೇನಲ್ಲ? ತಲೆಯ ಮೇಲಿದ್ದ ಕಿರೀಟ ತೆಗೆದು ತಲೆ ಕೆರೆಯತೊಡಗಿದ.

ರಾಮಸಿಂಹಯ್ಯ: ಇಂದ್ರ, ಪ್ರಭುಗಳೇ ಬರ್ಲೆ.

ಇಂದ್ರ: ಏ ಬಾ ಇಲ್ಲಿ ಎಂದು ನಿನ್ನ ಹೆಸ್ರೇ ಹೇಳಲಿಲ್ಲವಲ್ಲ ಎಂದನು.

ರಾಮಸಿಂಹಯ್ಯ: ನನ್ನನ್ನು ನವಗ್ರಹ ಅಂತಾರೆ. ನಾನು ಹಾಗೆ ಒಂದೇ ಸಲ ಎಲ್ರನ್ನೂ ಸೇರಿಸ್ಕೊಂಡು ವಕ್ಕರಿಸಿಕೊಳ್ತೀನಿ. ಅದೇ ಬೆಡ್ ಕಥೆ ಹುಡುಕಿಕೊಂಡು ಬಂದಿದ್ದು ಅಂತ ನಂಗೆ ಗೊತ್ತು. ಇಂದ್ರಲೋಕದ ಪ್ರಭುಗಳೇ ಇಲ್ಲೇ ಕಾಯ್ತಿರಿ. ನಿಮ್ಮ ಯಮಲೋಕದ ಭಂಟರು ಬರುತ್ತಾರೆ. ನಾ ಹೋಗಿ ಬರ್ಲಾ?

ಇಂದ್ರ: ಯಮಲೋಕದ ಭಂಟರು ಯಾವಾಗ ಬರ್ತಾರೋ, ಇನ್ನೂ ಎಲ್ಲಿ ತನಕ ಕಾಯ್ಕೋಬೇಕೋ, ಯಮಪುರಿಯ ಬೆಡ್ ಕಥೆ ಯಾವಾಗ ಕೇಳ್ತೀನೋ?

ರಾಮಸಿಂಹಯ್ಯ: ಇಂದ್ರ ಪ್ರಭುಗಳೇ, ಯಮನ ಬೆಡ್ ಕಥೆ ನಂಗೂನೂ ಹೀಗೆ ಹೇಳಿ ಮಾಯವಾದ್ರು.

ಇಂದ್ರ: ಆ ತರುಣಿ ಯಾರೂಂತ ನಂಗೆ ಹೇಳ್ತೀರಾ?

ರಮ್ಯ: ಶಾಸ್ತ್ರಿಗಳಿಗೆ ಆಹಾರವನ್ನು ತಂದುಕೊಟ್ಟಳು. ಅದನ್ನು ಒಂದು ಬಾಕ್ಸ್‌ನಲ್ಲಿ ಇಡುವಂತೆ ಹೇಳಿದರು. ಪಕ್ಕದಲ್ಲಿದ್ದ ಚಿತ್ರಗುಪ್ತರನ್ನು ಪರಿಚಯಿಸುತ್ತ ಇವರನ್ನು ಹೊರಗೆ ಕರೆದುಕೊಂಡು ಹೋಗು ಎಂದು ಅಪ್ಪಣೆ ಮಾಡಿದರು.

ಶಾಸ್ತ್ರಿ: ಚಿತ್ರಗುಪ್ತರೆ ಯಾವುದೇ ಸಂಕೋಚವಿಲ್ಲದೆ ನಮ್ಮ ಮನೆಯಲ್ಲಿ ತಂಗಬಹುದು. ನಿತ್ಯಕರ್ಮಗಳನ್ನು ಅನುಷ್ಠಾನಗೊಳಿಸಬಹುದು ಎಂದರು.

ಚಿತ್ರಗುಪ್ತರು: ರಮ್ಯ ಜೊತೆಯಲ್ಲಿ ಆಸ್ಪತ್ರೆಯಿಂದ ನಡೆದುಕೊಂಡು ಬರುತ್ತಿದ್ದರು. ಮಾರ್ಗ ಮಧ್ಯದಲ್ಲಿ ಮೈಸೂರು ಅರಮನೆಯನ್ನು ಕಂಡು ರಮ್ಯಾ ಏನಿದು ಭವ್ಯವಾದ ಮಂಟಪ. ಮೂರು ಲೋಕದಲ್ಲಿ ಇಲ್ಲವಲ್ಲ. ನೋಡುವುದಕ್ಕೆ ನಿನ್ನ ಹಾಗೆ ರಮ್ಯವಾಗಿದೆ, ಪುನೀತವಾಗಿದೆ ಹಾಗೂ ಮಧುರವಾಗಿದೆ. ಒಟ್ಟಿನಲ್ಲಿ ಈ ಭವ್ಯ ಮಂಟಪವನ್ನು ವರ್ಣಿಸಲು ಸಾಧ್ಯವಿಲ್ಲ. ನಿಮ್ಮ ಮನೆ ಸಿಕ್ಕಿತಾ ಎಂದು ಕೇಳಿದರು.

ರಮ್ಯ: ಓಹೋ ಇದೋ ನಮ್ಮ ಮನೆ ಎಂದು ಚಿತ್ರಗುಪ್ತರಿಗೆ ಕೈ ತೋರಿಸಿದಳು.

ಪಕ್ಕದ್ಮನೆ ಪದ್ಮ: ಏನಮ್ಮಾ ರಮ್ಯ ನಿಮ್ಮಣ್ಣನ ಸ್ಥಿತಿ ಹೇಗಿದೆ?

ರಮ್ಯ: ಪದ್ಮಮ್ಮ ಇವತ್ತು ನಮ್ಮಣ್ಣನಿಗೆ ಪ್ರಜ್ಞೆ ಬಂತು. ಚಿತ್ರಗುಪ್ತರು ಮಿಕಿಮಿಕೀಂತ ನೋಡುತ್ತಿದ್ರು.

(ಮುಂದುವರೆಯುವುದು)



# ಬಿಲ್ವ ಮಹಾತ್ಮೆ

ಶಿವಾರ್ಚನೆಗೆ ಬಿಲ್ವಪತ್ರೆಯು ಎಷ್ಟು ಪವಿತ್ರವಾದುದೆಂದು ಹೇಳುವುದಾದರೆ ದೇವರ ಪೂಜೆಗೆ ಬಿಲ್ವಪತ್ರೆಯನ್ನು ಸರಬರಾಜು ಮಾಡುವುದಕ್ಕಾಗಿ ದತ್ತಿ ಬಿಟ್ಟ ಉದಾಹರಣೆಗಳಿವೆ.. ಪದ್ಮಶಿವನೆಂಬ ಪೂಜಾರಿಯು ನಾಗೇಶ್ವರ ದೇವಾಲಯವನ್ನು ಕಟ್ಟಿಸಿದನೆಂದೂ, ಶಿವನ ಪೂಜೆಗೆ ಬಿಲ್ವಪತ್ರೆಯನ್ನೂ ಸರಬರಾಜು ಮಾಡಲು ಸಾಮಂತ ರಾಮಯ್ಯ ಎಂಬುವನಿಗೆ ಭೂಮಿಯನ್ನು ದತ್ತಿ ಬಿಡಲಾಗಿತ್ತೆಂದೂ ಹನ್ನೊಂದನೆಯ ಶತಮಾನದ ಚಾಲುಕ್ಯ ಶಾಸನ ಹೇಳುತ್ತದೆ.

ತಿರುಚಿ ಜಿಲ್ಲೆಯ ನೇರೂಂಗ ಪುಷ್ಪನಾಥ ಸ್ವಾಮಿಗೆ ಸಾವಿರ ಬಿಲ್ವಪತ್ರೆ ಸರಬರಾಜಿನ ಏರ್ಪಾಟು ಮಾಡುವುದಕ್ಕಾಗಿ ಇನ್ನೂರು ಕುಳ ಗದ್ದೆಯನ್ನು ದಾನ ಮಾಡಿದ ಸಂಗತಿ 12ನೇ ಶತಮಾನದ ಶಾಸನವೊಂದರಲ್ಲಿದೆ. ತಮಗರಿವಿಲ್ಲದಂತೆಯೇ ಬಿಲ್ವಪತ್ರೆಯನ್ನು ಶಿವಲಿಂಗದ ಮೇಲೆ ಎಸೆದ ಎಷ್ಟೋ ಜನರನ್ನು ಶಿವನು ಆಶೀರ್ವದಿಸಿ ಕೈಲಾಸವನ್ನು ಕೊಟ್ಟ ಕಥೆಗಳು ಶಿವ ಸಾಹಿತ್ಯದಲ್ಲಿ ಹೇರಳವಾಗಿ ದೊರೆಯುತ್ತವೆ.

ಬಿಲ್ವವೃಕ್ಷದ ಉತ್ಪತ್ತಿಯನ್ನು ಪರಮೇಶ್ವರನು ಪಾರ್ವತೀದೇವಿಗೆ ಈ ರೀತಿ ಹೇಳಿದ್ದಾನೆ.

ಒಮ್ಮೆ ಮಹಾಲಕ್ಷ್ಮಿಯು ಒಂದು ಸಹಸ್ರ ಕಮಲ ಪುಷ್ಪಗಳನ್ನು ತಂದು ಶಿವನ ಪೂಜೆ ಮಾಡಬೇಕೆಂದು ಮನಸ್ಸಿನಲ್ಲಿ ಸಂಕಲ್ಪ ಮಾಡಿದಳು. ಅಂತೆಯೇ ಶ್ರೀ ಲಕ್ಷ್ಮೀದೇವಿಯು ಅಸಾಮಾನ್ಯ ಭಕ್ತಿಯಿಂದ ಒಂದು ಸಾವಿರ ಕಮಲ ಪುಷ್ಪಗಳನ್ನು ತಂದಿಟ್ಟುಕೊಂಡು ಪೂಜೆಯನ್ನು ಆರಂಭಿಸಿದಳು. ಎಲ್ಲವೂ ಮುಗಿದು ಕೊನೆಯಲ್ಲಿ ಒಂದು ಕಮಲ ಪುಷ್ಪ ಕಡಿಮೆಯಾಗಿದ್ದುದನ್ನು ತಿಳಿದು ಅತ್ಯಂತ ಚಿಂತೆಗೊಳಗಾದಳು. ಹಾಗೆಯೇ ಚಿಂತಿಸುತ್ತಿದ್ದ ಲಕ್ಷ್ಮೀದೇವಿಯು ದೃಢಚಿತ್ತಳಾಗಿ ತನ್ನ ಒಂದು ಸ್ತನವನ್ನೇ ಕಮಲ ಪುಷ್ಪದ ಬದಲಾಗಿ ಅರ್ಪಿಸಿದಳು. ಮತ್ತು ಪೂಜೆಯನ್ನು ಮುಗಿಸಿದಳು. ಲಕ್ಷ್ಮೀದೇವಿಯ ಅನನ್ಯ ಭಕ್ತಿಗೆ ಮನಸೋತ ಶಿವನಿಗೆ ಅತ್ಯಾನಂದವಾಯಿತು. ಲಕ್ಷ್ಮೀದೇವಿಯ ಕುಚವನ್ನು ತನ್ನ ತಲೆಯ ಮೇಲಿಟ್ಟುಕೊಂಡು ನರ್ತನ ಮಾಡಿದನು. ನಂತರ ಆ ಕುಚವನ್ನು ಶ್ರೀಶೈಲ ಪರ್ವತದಲ್ಲಿ ಶಿಖರದ ಮೇಲೆ ಸ್ಥಾಪಿಸಿದನು.

ಆಗ ಆ ಸ್ತನದಿಂದ ಒಂದು ಪವಿತ್ರವಾದ ಅದ್ಭುತವಾದ ವೃಕ್ಷವೂ ಉದ್ಭವವಾಗಿ ಬೆಳೆದು ನಿಂತಿತು. ಆ ವೃಕ್ಷವನ್ನು ಶ್ರೀದೇವಿಯ ಸ್ತಲದಿಂದ ಉದ್ಭವವಾದ್ದರಿಂದ ಶ್ರೀವೃಕ್ಷವೆಂದು ಕರೆದನು. ಆ ವೃಕ್ಷವನ್ನು ತ್ರಿಜಟೀ ಎಂದು ಬಿಲ್ವ ಎಂದೂ ಕರೆಯಲ್ಪಟ್ಟು ಭೂಮಿಯಲ್ಲಿ ಪ್ರಸಿದ್ಧವಾಗಿದೆ. ಈ ವೃಕ್ಷದ ದಳಗಳಿಂದ ಪೂಜಿಸಿದರೆ ಶಿವನಿಗೂ ವಿಷ್ಣುವಿಗೂ ಸಂತೋಷವಾಗುತ್ತದೆ ಎಂದು ಹೇಳಲಾಗಿದೆ.

ಇನ್ನೊಂದು ದಂತಕಥೆಯ ಮೇರೆಗೆ ಪರಮೇಶ್ವರನು ತ್ರಿಪುರಾಸುರರು ಅಂತರಿಕ್ಷದಲ್ಲಿ ತ್ರಿಪುರಗಳನ್ನು ನಿರ್ಮಿಸಿ ಜನರಿಗೆ ದೇವತೆಗಳಿಗೆ ತಡೆಯಲಾರದ ತೊಂದರೆ ಕಿರುಕುಳ ಕೊಡುತ್ತಿದ್ದವರನ್ನು ಸಂಹಾರ ಮಾಡಲು ಸಮಯ ಕಾಯುತ್ತಾ ಇದ್ದನು. ಆ ತ್ರಿಪುರಗಳು ಚಲಿಸುತ್ತಾ ಒಂದೆಡೆ ಸೇರಲು ಒಂದು ಸಹಸ್ರ ವರ್ಷದ ಅವಧಿ ಬೇಕಾಗಿತ್ತು. ಹೀಗೆ ಆ ಮೂರು ಪುರಗಳು ಒಂದೆಡೆ ಬಂದಾಗ ತನ್ನ ಬಿಲ್ಲಿನಿಂದ ಹೊಡೆದು ಕೆಡವಲು ಬಿಲ್ಲು ಹಿಡಿದು ನಿಂತಿದ್ದನು. ಆಗ ಶಿವನ ಕೈಲಿದ್ದ ಬಿಲ್ಲು ಚಿಗುರಿ ಬಿಲ್ವಪತ್ರೆಯಾಯಿತು ಎಂದು ಹೇಳಲಾಗಿದೆ.

(ಅನುಭವ ಶಿಖಾಮಣಿ) *(ಮುಂದುವರೆಯುವುದು)*

*ಸಂಗ್ರಹ: ಎಸ್.ಜೆ. ಕುಮಾರಾರಾಧ್ಯ, ಮೈಸೂರು*

ಡಿಸೆಂಬರ್ 2017 ತಿಂಗಳಲ್ಲಿ ಈ ಕೆಳಕಂಡ ಮಹಿಳಾಮಣಿಗಳ ಹುಟ್ಟುಹಬ್ಬದ ಪ್ರಯುಕ್ತ ಚಾಮುಂಡೇಶ್ವರಿ ದೇವಿ ಆಯುರಾರೋಗ್ಯ ಐಶ್ವರ್ಯಗಳನ್ನು ಕರುಣಿಸಲಿ ಎಂದು ಮ.ವಿ. ಬಳಗ ಕೋರಿದೆ.

1 ಭವಾನಿ, ಮಡಿಕೇರಿ
2 ರಮ್ಯಶ್ರೀ, ರಾಯಚೂರು
3 ಯಮುನಾ, ಹಾಸನ
4 ಮಹೇಶ್ವರಿ, ಕಡೂರು
5 ಪ್ರಭಾವತಿ, ಬಾಂಬೆ
6 ನಿವೇದಿತಾ, ಮಂಗಳೂರು
7 ತೇಜಸ್ವಿನಿ, ಕನಕಪುರ
8 ಜಯಂತಿ, ಚೆನ್ನೈ
9 ಚಾರುಲತಾ, ತಿರುಪತಿ
10 ಕಾಂತಿಮತಿ, ಗುಲ್ಬರ್ಗಾ
11 ದಾಕ್ಷಾಯಿಣಿ, ಊಟಿ
12 ವಿದ್ಯಾಶ್ರೀ, ಮೈಸೂರು
13 ಚಾಂದನಿ, ಚನ್ನಪಟ್ಟಣ
14 ಸಂಗೀತ, ಬೆಂಗಳೂರು
15 ಮಾಲಿನಿ, ತುಮಕೂರು
16 ಸೌಂದರ್ಯ, ಕೋಲಾರ
17 ಹೇಮಲತಾ, ತಿಪಟೂರು
18 ಸಂಧ್ಯಾ, ಮಂಡ್ಯ
19 ಜಯಲಕ್ಷ್ಮಿ, ಜೈಪುರ
20 ಬಂಗಾರಿ, ಕಡಪ
21 ನಂದಿತಾ, ಉಡುಪಿ
22 ತ್ರಿಪುರಾಂಬಾ, ಗೋವಾ
23 ರಾಗಿಣಿ, ಬೇಲೂರು
24 ಇಂದ್ರಾಣಿ, ಪೂನಾ
25 ಚೂಡಾಮಣಿ, ಪಾಂಡವಪುರ
26 ಜಲಜ, ರಾಮದುರ್ಗ
27 ದೇವಿಕಾ, ಭದ್ರಾವತಿ
28 ಪವಿತ್ರ, ಮಂಡ್ಯ
29 ಭಾಗೀರಥಿ, ಮೈಸೂರು
30 ಮನೋರಮಾ, ಜಯಪುರ
31 ಪಲ್ಲವಿ, ಹೈದರಾಬಾದ್

**ಮಹಿಳಾ ವಿಶೇಷ ಬಳಗ, 2017-18**

| | |
|---|---|
| ಶ್ರೀಮತಿ ರುಕ್ಮಿಣಿ | ಅಧ್ಯಕ್ಷರು |
| ಶ್ರೀಮತಿ ದಿವ್ಯ ವಿನಯ್ | ಕಾರ್ಯದರ್ಶಿ |
| ಶ್ರೀಮತಿ ಸಾವಿತ್ರಿ ಎಂ.ಸಿ. | ಸದಸ್ಯರು |
| ಶ್ರೀಮತಿ ವೀಣಾ | ಸದಸ್ಯರು |
| ಶ್ರೀಮತಿ ವೀಣಾ ಟಿ.ಆರ್. | ಸದಸ್ಯರು |
| ಶ್ರೀಮತಿ ಭಗವತಿ | ಸದಸ್ಯರು |
| ಶ್ರೀಮತಿ ಜಯಲಕ್ಷ್ಮಿ | ಸದಸ್ಯರು |
| ಶ್ರೀಮತಿ ಮಂಜುಳಾ ರಮೇಶ್ | ಸದಸ್ಯರು |
| ಶ್ರೀಮತಿ ಮಮತಾ ಶಶಿಧರ್ | ಸದಸ್ಯರು |
| ಶ್ರೀಮತಿ ಎಂ.ಜಿ. ವತ್ಸಲಾ | ಸದಸ್ಯರು |
| ಶ್ರೀಮತಿ ನಿವೇದಿತಾ | ಸದಸ್ಯರು |
| ಶ್ರೀಮತಿ ನಂದಿನಿ ಕೆ.ಆರ್. | ಸದಸ್ಯರು |
| ಶ್ರೀಮತಿ ದಿವ್ಯ | ಸದಸ್ಯರು |
| ಶ್ರೀಮತಿ ರೂಪಾ | ಸದಸ್ಯರು |
| ಶ್ರೀಮತಿ ಮಾಲಾ | ಸದಸ್ಯರು |
| ಶ್ರೀ ಕುಮಾರಾರಾಧ್ಯ ಎಸ್.ಜಿ. | ಅಧ್ಯಕ್ಷರು |
| ಶ್ರೀ ದ್ವಾರಕಾನಾಥ್ ಜಿ. | ಕಾರ್ಯದರ್ಶಿ |
| ಶ್ರೀ ನಾಗಭೂಷಣ್ ಎನ್ | ಸದಸ್ಯರು |
| ಶ್ರೀ ಕಾಂತರಾಜು ಎಂ. | ಸದಸ್ಯರು |
| ಶ್ರೀ ವಿಷ್ಣು ಕೆ.ಟಿ. | ಸದಸ್ಯರು |
| ಶ್ರೀ ಅರುಣ್ ಕುಮಾರ್ | ಸದಸ್ಯರು |
| ಶ್ರೀ ಮುರಳೀಧರ ಶಾಸ್ತ ಎಂ.ಎಸ್ | ಸದಸ್ಯರು |
| ಶ್ರೀ ಸಂಜೀವಕುಮಾರ್ | ಸದಸ್ಯರು |
| ಶ್ರೀ ಪುರುಷೋತ್ತಮ್ ಎಂ. | ಸದಸ್ಯರು |
| ಶ್ರೀ ರವಿಕುಮಾರ್ ಪಿ. | ಸದಸ್ಯರು |
| ಶ್ರೀ ಜಯಕುಮಾರ್ | ಸದಸ್ಯರು |
| ಡಾ. ವಿಜಯಕುಮಾರ್ | ಸದಸ್ಯರು |
| ಶ್ರೀ ಮುರಳಿ | ಸದಸ್ಯರು |
| ಶ್ರೀ ವೀರಶೈವಮೂರ್ತಿ | ಸದಸ್ಯರು |
| ಶ್ರೀ ಶ್ರೀನಿವಾಸ್ | ಸದಸ್ಯರು |



## ನಿಮ್ಮ ಆರೋಗ್ಯ ನಿಮ್ಮ ಕೈಯಲ್ಲೇ ಇದೆ

**ಕೃಪೆ: ಡಾ. ಕೆ. ರಾಮಚಂದ್ರ, ಮಂಡ್ಯ**

## ಮಧುಮೇಹಿಗಳ ಪಾದಗಳ ಸಂರಕ್ಷಣೆಗಾಗಿ 21 ಸೂತ್ರಗಳು

**13. ಪಾದಗಳಲ್ಲಿ ಬಿರುಕು ಇರಬಾರದು.** ಇದು ಸಾಮಾನ್ಯವಾಗಿ ದಿನನಿತ್ಯ ನೋಡುವ ದೃಶ್ಯ. ವಿಶೇಷವಾಗಿ ಬರಿಗಾಲಿನಲ್ಲಿ ಕೆಲಸ ಮಾಡುವ ರೈತರು ಹಾಗೂ ಕಾರ್ಮಿಕರಲ್ಲಿ ಹೆಚ್ಚು ಕಂಡುಬರುತ್ತದೆ. ಹೆಚ್ಚಿನ ರೋಗಿಗಳು ಹೀಟಿನಿಂದ ಒಡೆದುಕೊಳ್ಳುತ್ತದೆ. ಹಾಗೂ ಅದು ಒಡೆದುಕೊಂಡರೆ ಬಿಸಿ ಅಬೆ ಹೋಗುತ್ತದೆ. ಇತ್ಯಾದಿ ತಪ್ಪು ಕಲ್ಪನೆಗಳನ್ನು ಸೃಷ್ಟಿಸಿಕೊಂಡು ಬಹಳ ಹಗುರವಾಗಿ ಪರಿಗಣಿಸಿ ಹೆಚ್ಚಿನ ಅನಾಹುತಗಳಿಗೆ ತುತ್ತಾಗುತ್ತಾರೆ. ಇಂತಹ ಬಿರುಕುಗಳು ಸೋಂಕು ಹರಡುವುದಕ್ಕೆ ಹೆದ್ದಾರಿ ಇದ್ದಂತೆ. ಆದುದರಿಂದ ಯಾವುದೇ ಕಾರಣಕ್ಕೂ ಬಿರುಕುಗಳು ಇರಬಾರದು. ಇದಕ್ಕೆ ಸೂಕ್ತವಾದ ಮುಲಾಮು ಹಚ್ಚಿ ಸರಿಪಡಿಸಿಕೊಂಡು ಹಾಗೂ ಆದಷ್ಟು ಮನೆಯಲ್ಲಿ ಉತ್ತಮ ಚಪ್ಪಲಿ ಧರಿಸಬೇಕು ಹಾಗೂ ಉತ್ತಮ ಷೂಗಳನ್ನು ಧರಿಸಿ ಬಿರುಕುಗಳು ಆಗದಂತೆ ನೋಡಿಕೊಳ್ಳುವುದು ಬಹಳ ಮುಖ್ಯ.

**14. ಸೂಕ್ತವಾದ ಹಾಗೂ ಸರಿಯಾದ ಪಾದರಕ್ಷೆಗಳನ್ನು ಉಪಯೋಗಿಸಿ ಹಾಗೂ ಹತ್ತಿ ಕಾಲುಚೀಲ ಧರಿಸಿ.**

ಎಲ್ಲಾ ಮಧುಮೇಹಿಗಳು, ಮಧುಮೇಹಿಗಳಿಗೆ ಸೂಕ್ತವಾಗಿ ಮಾಡಲ್ಪಟ್ಟ ಪಾದರಕ್ಷೆಗಳನು ಉಪಯೋಗಿಸುವುದು ಒಳ್ಳೆಯದು. ಬೆಲೆ ಸ್ವಲ್ಪ ಹೆಚ್ಚಾದರೂ ಪಾದಗಳ ಸಂರಕ್ಷಣೆ ಅತಿ ಮುಖ್ಯ. ಕಾಲುಚೀಲಗಳು ಸಾಧ್ಯವಾದಷ್ಟು ಹತ್ತಿಯದಾಗಿರಲಿ. ನೈಲಾನ್ ಸಾಕ್ಸ್ ಇತ್ಯಾದಿ ಉಪಯೋಗಿಸಬೇಡಿ.

**15. ದಿನನಿತ್ಯ ಸೂಕ್ತವಾದ ವ್ಯಾಯಾಮ ಅಳವಡಿಸಿಕೊಳ್ಳಿ.**

ಮಧುಮೇಹಿಗಳಿಗೆ ಕ್ರಮಬದ್ಧವಾಗಿ ಹಾಗೂ ಸೂಕ್ತವಾದ ದಿನನಿತ್ಯ ವ್ಯಾಯಾಮ ಬಹಳ ಅತ್ಯಗತ್ಯ. ಇದರಿಂದ ಹೆಚ್ಚು ರಕ್ತ ಸಂಚಲನಗೊಂಡು ಉತ್ತಮ ರಕ್ತ ಪರಿಚಲನೆ ಹಾಗೂ ನರಗಳಿಗೆ ಉತ್ತಮ ಪೌಷ್ಟಿಕಾಂಶ ದೊರಕುತ್ತದೆ. ರೋಗಿಗೆ ನರಬೇನೆ ಹಾಗೂ ರಕ್ತನಾಳಗಳ ತೊಂದರೆಯಿಂದ ಉತ್ತಮ ಪರಿಹಾರ ದೊರಕುತ್ತದೆ.

**16. ಸಂಪೂರ್ಣ ಧೂಮಪಾನ ನಿಷೇಧ (ಯಾವುದೇ ಕಾರಣಕ್ಕೂ ಬೀಡಿ, ಸಿಗರೇಟು, ಹೊಗೆಸೊಪ್ಪು, ಕಡ್ಡಿಪುಡಿ, ಚುಟ್ಟಾ, ನಶ್ಯ ಇತ್ಯಾದಿ ಉಪಯೋಗಿಸಬಾರದು)**

ಮಧುಮೇಹಿಗಳು ಯಾವುದೇ ಕಾರಣಕ್ಕೂ ಧೂಮಪಾನ ಮಾಡಬಾರದು. ಧೂಮಪಾನದಿಂದ ರಕ್ತನಾಳಗಳು ಸಂಕುಚಿತಗೊಂಡು ರಕ್ತ ಚಲನೆಗೆ ಅಡಚಣೆಯುಂಟು ಮಾಡುತ್ತದೆ. ಕೆಲವೊಂದು ರೋಗಿಗಳು ಬೀಡಿ, ಸಿಗರೇಟು, ಬೀಡ, ನಶ್ಯ ಹಾಕಬಹುದು ಎಂಬ ತಪ್ಪು ಕಲ್ಪನೆಯಲ್ಲಿರುತ್ತಾರೆ. ಆದುದರಿಂದ ಹೊಗೆಸೊಪ್ಪನ್ನು ಉಪಯೋಗಿಸುವ ಬೀಡಾ, ಸಿಗರೇಟು, ಚುಟ್ಟಾ, ಕಡ್ಡಿಪುಡಿ, ಜರ್ದಾ, ನಶ್ಯ ಇವೆಲ್ಲ ಒಂದೇ ಗುಂಪಿಗೆ ಸೇರಿದ ವಸ್ತುಗಳು. ಇದೆಲ್ಲವು ರಕ್ತನಾಳಗಳ ಮೇಲೆ ಕೆಟ್ಟ ಪರಿಣಾಮ ಬೀರುತ್ತವೆ.

# Globalisation and Environmental pollution: Some critical views

**Introduction**

Globalisation exists as a universal phenomenon with the aim of integrating societies, economies and cultures through a common link of trading policies, techology and communication. With the advent of globalization through the standard of economy has changed, it has also brought about many new issues in the form of growth terrorism, ecological disasters, environmental pollution and spread of diseases, etc., which too are some of the major problems the world is facing today. This essay would critically focus on some of the problems thrown up by globalization.

**Industrialization and Deforestation**

As result of globalization large number of industries were set up all over the especially in the third world countries. This process has led to the destruction of forests causing serious threat to both plant and animal species. Report reveals that a major portion of the forest area is being decreased every year. This can create far reaching consequences on the environment. Due to deforestation the temperature of earth is raising leading to global warming. Many environmentalists have some forward raising the issue, but still nobody could find a way to solve the problems. The global warming has caused the polar ice to melt and to incrase of sea water level. This is a major threat to the only mother earth of ours.

**Haphazard management of Industrial waste**

Each industry produces a huge amount of hazardous waste materials everyday andmany of them have no proper means of waste disposal. They either dump the waste into the sea or river or in some land mostly the banks of rivers. As a result the land and water get polluted and contaminated making it highly unsafe for drinking purpose. Several fish species have already disappeared and are disappearing due to this uncontrolled process. The outlet of gases from industries are highly dangerous which include poisonous chemicals like sulphur oxides,nitrogen oxides, carbon monoxide, toxic metals like lead, cadmium, etc. This adds to air pollution. Air pollution



has far reaching effects on human health. It mostly affects the respiratory system and the cardio vascular system. Inhalation of polluted air negatively affects the functioning of lungs and other organs of our body. It can lead to minor breathing problems to severe respiratory disorders as the degree of exposure to pollutants increases.

**Acid Rain**

Sulphur oxides react with atmospheric water producing sulphuric acid and thus forming acid rain which causes destruction of historical monuments. Such incidents have already been reported in the case of Taj Mahal. Another harmful chemical which appeared in recent times is chlorofloro carbons or CFCs. CFCs are considered ideal for many industrial, commercial and household applications like coolants for commercial and home refrigeration units, aerosol propellants, electronic cleaning solvents and blowing agents. Chlorofloro carbons were found to be the major reason for the depletion of ozone layer.

**Depletion of Ozone layer**

The destruction of ozone layer can be very dangerous for the living beings as it protects our earth from the harmful radiations from the sun which can lead to serious skin diseases. Over a few decades the agricultural production has increased tremendously with the use of hybrid varieties of seeds and plants, highly effective fertilizers and insecticides. These chemicals are hazardous to the human health with evidences of neurological defects have already been reported.

**Conclusion**

We will have to adopt certain eco-friednly techniques to bring down the side effects of globalization. Some programmes have been already introduced like Montreal Protocol. The Montreal Protocol on substances that depletes the ozone layer is an international treaty designed to perfect the ozone layer by brnging down the use of some less harmful chemicals. It is the duty of each and every citizen to save our mother earth. Therefore combined effort must be taken in this regard. We have to think globally and act locally to save this unique mother earth of ours.

*-Gayathri, B'lore*

## Anjana Weds Advaith on 12th November, 2017




Anjana and her whole family supporting our magazine from past two years. She is the daughter of Dr. Mohan Das and Smt. Mini. Mahila Vishesha Balaga wishes to her happy married life and bring all joys in her life.



**Best of Luck!**

Anjana's Marriage function at Thrissur met two girls namely Keerthana and Nandana. Both the girls were very smart and cute. One is good dancer. Another one is young cricketer. Their parents and grand parents were giving full support in all aspects. Best of Luck for both the girls in connection with Children's Day.

*Ma.Vi. Balaga*

ಮೈಸೂರಿನಲ್ಲಿ ಕಳೆದ ವಾರ ನಡೆದ 83ನೇ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಉದ್ಘಾಟಿಸಿದ ಗಣ್ಯರು. ಮೂರು ದಿವಸ ನಡೆದ ಕಾರ್ಯಕ್ರಮ ಅಚ್ಚುಕಟ್ಟಾಗಿ ಮೂಡಿಬಂದಿತು. ಊಟ ತಿಂಡಿ ವಾಸ್ತವ್ಯ ಕಾರ್ಯಕ್ರಮಗಳು ಎಲ್ಲವೂ ಚೆನ್ನಾಗಿದ್ದು, ಕನ್ನಡಿಗರ ಮನಸ್ಸನ್ನು ಸೂರೆಗೊಂಡಿತು.





RNI No. KARKAN/2015/71642
KA/SK/MYS/1091/2017-2019



# KSRTC

Bangalore Central Division : Bangalore

**Introduction of New Rajahamsa Service on the route Bengalure to Pampa (Shabarimalai)**

**From 1-12-2017 on the route : Bengaluru to Pampa (Shabarimalai) via Mysore, Kozhikode, Thrissur, Kottayam.**

**Bus Departs from Bangalore at 1330 and arrives at Pampa at 0845.**

**Return Trip Starts from Pampa at 1700 and reaches Bengaluru at 1200**

**Passenger Fare (Adult):**

**Rajahamsa Rs. 835-00**

Advance reservation of tickets for the above service can be done at various reservation counters in the Karnataka State, besides private reservation counters in neighbouring states also. Tickets can also be reserved through interet (www.ksrtc.in)

***Divisional Controller***


Edited, Published and Owned by **H.V. Venkatasubbarao**, No. 1021, 14th Cross, 2nd Stage, Hebbal, Mysore-570 017 and Printed by B.C. Meera and Printed at Annapoorna Offset Printer, No. 511, 14th Main, Saraswathipuram, Mysore 570 009. Published at No. 1021, 14th Cross, 2nd Stage, Hebbal, Mysore-570 017. E-mail: mahilavishesha@yahoo.com Web: www.mahilavishesha.in Editor: **H.V. Venkatasubbarao** Mob.: 88803-34444, RNI No. KARKAN/2015/71642

ತೆರೆದ ಅಂಚೆ

To

ಇಂದ:
ಮಹಿಳಾ ವಿಶೇಷ, ನಂ. 1,
ಸೀತಾವಿಳಾಸ ಛತ್ರ, ಎನ್.ಎಸ್. ರಸ್ತೆ,
ಮೈಸೂರು-24